# ಕರ್ನಾಟಕ ಸರ್ಕಾರ
# ಕಾರ್ಖಾನೆಗಳು, ಬಾಯ್ಲರುಗಳು
# ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ

## ವಾರ್ಷಿಕ ವರದಿ - 2020
## (01.01.2020 ರಿಂದ 31.12.2020ರ ವರೆಗೆ)

**ಕಾರ್ಖಾನೆಗಳು, ಬಾಯ್ಲರುಗಳು**
**ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ**
**ಎರಡನೇ ಮಹಡಿ, ಕಲ್ಯಾಣ-ಸುರಕ್ಷಾ ಭವನ**
**ಬನ್ನೇರುಘಟ್ಟ ರಸ್ತೆ, ಬೆಂಗಳೂರು -560 029**

## ಆಡಳಿತಾತ್ಮಕ ರೇಖಾಪಟ

### ಸಚಿವಾಲಯ

ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್
ಮಾನ್ಯ ಕಾರ್ಮಿಕ ಸಚಿವರು
ಕರ್ನಾಟಕ ಸರ್ಕಾರ
2ನೇ ಮಹಡಿ, ವಿಕಾಸ ಸೌಧ
ಬೆಂಗಳೂರು - 560 001.

### ಕಾರ್ಯದರ್ಶಿಗಳು

ಡಾ॥ ರಾಜ್ ಕುಮಾರ್ ಖತ್ರಿ, IAS
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಕಾರ್ಮಿಕ ಇಲಾಖೆ, 4ನೇ ಮಹಡಿ
ವಿಕಾಸ ಸೌಧ, ಬೆಂಗಳೂರು - 560 001.

### ಇಲಾಖಾ ಮುಖ್ಯಸ್ಥರು

ಶ್ರೀ ಕೆ.ಶ್ರೀನಿವಾಸ
ನಿರ್ದೇಶಕರು
ಕಾರ್ಖಾನೆಗಳು, ಬಾಯ್ಲರುಗಳು
ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ
2ನೇ ಮಹಡಿ, ಕಲ್ಯಾಣ ಸುರಕ್ಷಾ ಭವನ
ಬನ್ನೇರುಘಟ್ಟ ರಸ್ತೆ, ಬೆಂಗಳೂರು - 560 029.

# ಪರಿವಿಡಿ

## ಅಧ್ಯಾಯ - 1


| ಕ್ರ.ಸಂ | ವಿಷಯ | ಪುಟ ಸಂಖ್ಯೆ |
|---|---|---|
| 1 | ಇಲಾಖೆಯ ದೃಷ್ಟಿಕೋನ ಮತ್ತು ಗುರಿ | 4 |
| 2 | ಇಲಾಖೆಯ ಸಂಕ್ಷಿಪ್ತ ಧ್ಯೇಯೋದ್ದೇಶಗಳು | 4 |
| 3 | ಆಡಳಿತ ವ್ಯವಸ್ಥೆ | 5-6 |
| 4 | ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ಶಾಸನಗಳು | 6-7 |
| 5 | ಇಲಾಖೆಯ ಮುಖ್ಯ ಕಾರ್ಯಚಟುವಟಿಕೆಗಳು | 7-9 |


## ಅಧ್ಯಾಯ - 2


| ಕ್ರ.ಸಂ | ವಿಷಯ | ಪುಟ ಸಂಖ್ಯೆ |
|---|---|---|
| 1 | ಇಲಾಖೆಯ ಕಾರ್ಯನಿರ್ವಹಣೆ - ಕಾರ್ಖಾನೆ ವಿಭಾಗ | 10-15 |
| 2 | ಇಲಾಖೆಯ ಕಾರ್ಯನಿರ್ವಹಣೆ - ಬಾಯ್ಲರ್ ವಿಭಾಗ | 15-16 |
| 3 | ಪ್ರಸ್ತುತ ಜಾರಿಯಲ್ಲಿರುವ ಯೋಜನಾ ಕಾರ್ಯಕ್ರಮಗಳು | 16 |
| 4 | ಪೂರಕ ಚಟುವಟಿಕೆಗಳು | 17-19 |
| 5 | ಇಲಾಖೆಯ ಆಯವ್ಯಯದ ಮಾಹಿತಿ | 19 |
| 6 | ಅನುಬಂಧ- ಅ -[ಆರ್ಗನೈಸೇಶನ್ ಚಾರ್ಟ್] | 20 |
| 7 | ಅನುಬಂಧ- ಆ -[ಸಾಂಖ್ಯಿಕ ವಿವರ-ಕಾರ್ಖಾನೆಗಳ ವಿಭಾಗ] | 21-22 |
| 8 | ಅನುಬಂಧ- ಇ -[ಸಾಂಖ್ಯಿಕ ವಿವರ-ಬಾಯ್ಲರ್‌ಗಳ ವಿಭಾಗ] | 23-24 |

# ಕರ್ನಾಟಕ ಸರ್ಕಾರ

# ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ

## ವಾರ್ಷಿಕ ವರದಿ 2020 (01.01.2020 ರಿಂದ 31.12.2020)

## ಅಧ್ಯಾಯ – 1

### 1. ಇಲಾಖೆಯ ದೃಷ್ಟಿಕೋನ ಮತ್ತು ಗುರಿ (VISION & MISSION)

ಕೈಗಾರಿಕೆಗಳನ್ನು ಔದ್ಯೋಗಿಕ ಅಪಾಯಗಳಿಂದ ಮುಕ್ತಗೊಳಿಸುವ ನಿಟ್ಟಿನಲ್ಲಿ, ಕಾರ್ಖಾನೆಗಳಲ್ಲಿನ ಕಾರ್ಮಿಕರ ಸುರಕ್ಷತೆಯನ್ನು ಕಾಪಾಡಲು ಹಾಗೂ ಕೆಲಸದ ಪರಿಸರವನ್ನು ಸಂರಕ್ಷಿಸಲು, ಮೌಲ್ಯವರ್ಧಿತ ಸೇವೆಗಳನ್ನು ನೀಡುವ ಮುಂಚೂಣಿ ಸಂಸ್ಥೆಯಾಗಿ, ಜ್ಞಾನ ಮತ್ತು ಮಾಹಿತಿಯನ್ನು ಎಲ್ಲಾ ಭಾಗೀದಾರರಿಗೆ ತಲುಪಿಸುವುದರ ಜೊತೆಗೆ ಶಕ್ತಿವರ್ಧನ ಕ್ರಮಗಳು ಹಾಗೂ ತಿಳುವಳಿಕೆ ಮೂಡಿಸುವ ಕಾರ್ಯಕ್ರಮಗಳಿಂದ ಕೈಗಾರಿಕಾ ಸುರಕ್ಷತೆ, ಔದ್ಯೋಗಿಕ ಆರೋಗ್ಯ ಹಾಗೂ ಕೆಲಸದ ಪರಿಸರದಲ್ಲಿ ಸುಧಾರಣೆಯನ್ನು ಸಾದಿಸುವ ನಿಟ್ಟಿನಲ್ಲಿ ಶ್ರಮಿಸುವುದು ಹಾಗೂ ಎಲ್ಲಾ ಭಾಗೀದಾರರ ಪಾಲ್ಗೊಳ್ಳುವಿಕೆಯನ್ನು ಪ್ರೇರೇಪಿಸಿ, ಹೆಚ್ಚಿನ ಅರಿವನ್ನು ಮೂಡಿಸುವ ಮುಖಾಂತರ ಅಪಘಾತ ನಿಯಂತ್ರಣ ಮತ್ತು ಕೈಗಾರಿಕಾ ಅಭಿವೃದ್ಧಿಯ ಗುರಿಯನ್ನು ಸಾಧಿಸುವುದು.

### 2. ಇಲಾಖೆಯ ಸಂಕ್ಷಿಪ್ತ ಧ್ಯೇಯೋದ್ದೇಶಗಳು:

- ಅಪಾಯಮುಕ್ತ, ವಿಪತ್ತು ಮುಕ್ತ, ಆರೋಗ್ಯಕರ ಕೆಲಸದ ವಾತಾವರಣವು ಕಾರ್ಮಿಕರಿಗೆ ದೊರೆಯುತ್ತಿರುವುದನ್ನು ಖಚಿತಪಡಿಸಿಕೊಳ್ಳುವುದು. ಸಾರ್ವಜನಿಕ ಆಸ್ತಿ–ಪಾಸ್ತಿಗಳಿಗೆ ಮತ್ತು ಪರಿಸರಕ್ಕೆ ಸಂಭವಿಸಬಹುದಾದ ಹಾನಿಯನ್ನು ತಡೆಯುವುದು.
- ಕಾರ್ಖಾನೆಗಳು ಮತ್ತು ಬಾಯ್ಲರುಗಳಿಗೆ ಸಂಬಂಧಿಸಿದ ಎಲ್ಲಾ ಭಾಗೀದಾರರಿಗೆ ಪಾರದರ್ಶಕ, ತ್ವರಿತ ಸೇವೆಗಳನ್ನು ನೀಡಲು ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಅನುಮೋದಿಸುವ, ಆನ್‌ಲೈನ್ ಮೂಲಕ ಶುಲ್ಕ ಪಾವತಿಸುವ, ಆನ್‌ಲೈನ್ ಮೂಲಕ ವಾರ್ಷಿಕ / ಅರ್ಧವಾರ್ಷಿಕ ವರದಿಗಳನ್ನು ಸಲ್ಲಿಸುವ ಅವಕಾಶವನ್ನು ಕಲ್ಪಿಸುವುದು.
- ಕಾರ್ಖಾನೆಗಳ ಮತ್ತು ಕಟ್ಟಡ ಕಾರ್ಮಿಕರಿಗೆ ಹಾಗೂ ಆಡಳಿತ ವರ್ಗದವರಿಗೆ ಔದ್ಯೋಗಿಕ ಸುರಕ್ಷತೆ, ಆರೋಗ್ಯ, ವಿಪತ್ತು ನಿರ್ವಹಣೆ, ಅವರ ಹಕ್ಕು ಮತ್ತು ಬಾಧ್ಯತೆಗಳ ಕುರಿತು ಹೆಚ್ಚು ಅರಿವು ಮೂಡಿಸಲು ತರಬೇತಿ ಕಾರ್ಯಕ್ರಮ, ವಿಚಾರ ಸಂಕಿರಣ, ಸಂವಾದ ಮತ್ತು ಕಾರ್ಯಾಗಾರಗಳನ್ನು ಏರ್ಪಡಿಸುವುದು, ಸುರಕ್ಷತಾ ಕೈಪಿಡಿ, ಸುರಕ್ಷತಾ ವಾಹಿನಿ ಇತ್ಯಾದಿಗಳನ್ನು ಮುದ್ರಿಸಿ ಬಿಡುಗಡೆ ಮಾಡುವ ಮುಖಾಂತರ ಔದ್ಯೋಗಿಕ ಸುರಕ್ಷತೆ ಮತ್ತು ಆರೋಗ್ಯದ ಬಗ್ಗೆ ಕಾರ್ಮಿಕರಲ್ಲಿ, ಕೈಗಾರಿಕೋದ್ಯಮಿಗಳಲ್ಲಿ ಹಾಗೂ ಇತರೆ ಭಾಗೀದಾರರಲ್ಲಿ ತಿಳುವಳಿಕೆ ಮತ್ತು ಸುರಕ್ಷತಾ ಕಾರ್ಯ ನಿರ್ವಹಣೆಯ ನೈಪುಣ್ಯತೆಯನ್ನು ಹೆಚ್ಚಿಸುವುದು.
- ಉದ್ದಿಮೆಗಳಲ್ಲಿ ವಿದ್ಯುತ್ ಅನ್ನು ಉತ್ಪಾದಿಸಲು ಅಧಿಕ ಒತ್ತಡದ ಬಾಯ್ಲರುಗಳನ್ನು ಸ್ಥಾಪಿಸಲು ಪ್ರೇರೇಪಿಸುವುದು ಹಾಗೂ ಸಂಸ್ಕರಣೆಗೆ ಅಗತ್ಯವಾದ ಹಬೆಯನ್ನು ಕಡಿಮೆ ಒತ್ತಡದಲ್ಲಿ ಉಪಯೋಗಿಸಿ ಇಂಧನವನ್ನು ಉಳಿಸಲು ಉತ್ತೇಜಿಸುವುದು.
- ನೈಸರ್ಗಿಕ ಇಂಧನಗಳನ್ನು ಮುಂದಿನ ಪೀಳಿಗೆಗೆ ಉಳಿಸುವ ನಿಟ್ಟಿನಲ್ಲಿ ಅವುಗಳ ಬಳಕೆಯನ್ನು ಸಾಧ್ಯವಾದಷ್ಟು ಕಡಿತಗೊಳಿಸಿ, ಕೈಗಾರಿಕೆಗಳಿಂದ ಅನಗತ್ಯವಾಗಿ ವಾತಾವರಣಕ್ಕೆ ಸೇರಿಹೋಗುತ್ತಿರುವ ಉಷ್ಣತೆ/ಶಕ್ತಿಯನ್ನು ತಡೆಯುವುದು, ಮಾಲಿನ್ಯವನ್ನು ಕನಿಷ್ಠಗೊಳಿಸುವುದು ಹಾಗೂ ವ್ಯರ್ಥವಾಗುತ್ತಿದ್ದ ಜೈವಿಕ ಇಂಧನಗಳನ್ನು ಉಪಯೋಗಿಸಿ ಹಬೆಯನ್ನು ಹಾಗೂ ವಿದ್ಯುತ್‌ನ್ನು ಉತ್ಪಾದಿಸಲು ಉತ್ತೇಜಿಸುವುದು. ಹಾಲಿ ಕಾರ್ಯ ನಿರ್ವಹಿಸುತ್ತಿರುವ ಕಡಿಮೆ ಗುಣಮಟ್ಟದ ಹಾಗೂ ಇಂಧನ ಕ್ಷಮತೆಯಿಲ್ಲದ ಬಾಯ್ಲರುಗಳನ್ನು ಗುರುತಿಸಿ, ಅವುಗಳ ಬದಲು ಸುರಕ್ಷಿತವಾದ ಮತ್ತು ಕಾರ್ಯಕ್ಷಮತೆಯುಳ್ಳ ಬಾಯ್ಲರುಗಳನ್ನು ಉಪಯೋಗಿಸಲು ಹಾಗೂ ಹಬೆ ಉತ್ಪಾದನಾ ವೆಚ್ಚವನ್ನು ತಗ್ಗಿಸಲು ಪ್ರೇರೇಪಿಸುವುದು.
- ನೋಂದಾವಣೆಯಾಗದೆ ಇರುವ ಬಾಯ್ಲರುಗಳನ್ನು ಗುರುತಿಸಿ, ಅವುಗಳ ಬದಲು ಮಾನ್ಯತೆ ಪಡೆದ ಗುಣಮಟ್ಟದ ಹಾಗೂ ಇಂಧನ ದಕ್ಷತೆಯುಳ್ಳ ಬಾಯ್ಲರುಗಳಿಗೆ ಪರಿವರ್ತಿಸಲು / ಬದಲಾಯಿಸಲು ಪ್ರೇರೇಪಿಸುವುದು.

## 3. ಆಡಳಿತ ವ್ಯವಸ್ಥೆ:–

### 3.1 ಕೇಂದ್ರ ಕಛೇರಿ:–

ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯು, ಕರ್ನಾಟಕ ಸರ್ಕಾರದ ಕಾರ್ಮಿಕ ಸಚಿವಾಲಯದ ಅಪರ ಮುಖ್ಯ ಕಾರ್ಯದರ್ಶಿಗಳ ಆಡಳಿತಾತ್ಮಕ ನಿಯಂತ್ರಣದಡಿ ಕಾರ್ಯನಿರ್ವಹಿಸುತ್ತಿದೆ. ಇಲಾಖೆಯ ಕೇಂದ್ರ ಕಛೇರಿಯು ಬೆಂಗಳೂರಿನ ಬನ್ನೇರುಘಟ್ಟ ರಸ್ತೆಯಲ್ಲಿರುವ ಕಲ್ಯಾಣ ಸುರಕ್ಷಾ ಭವನದ ಎರಡನೇ ಮಹಡಿಯಲ್ಲಿರುತ್ತದೆ. ಇಲಾಖೆಯು ಕಾರ್ಖಾನೆಗಳು ಮತ್ತು ಬಾಯ್ಲರುಗಳ ಶಾಖೆಗಳನ್ನು ಹೊಂದಿರುತ್ತದೆ. ನಿರ್ದೇಶಕರು, ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ, ಇವರು ಎರಡೂ ಶಾಖೆಗಳ ಆಡಳಿತಾತ್ಮಕ ಮತ್ತು ಶಾಸನಾತ್ಮಕ ಮುಖ್ಯಸ್ಥರಾಗಿರುತ್ತಾರೆ. ಇಲಾಖೆಯಲ್ಲಿನ ಪೂರಕ ಕಾರ್ಯಚಟುವಟಿಕೆಗಳನ್ನು ನಡೆಸುವ ಸಂಸ್ಥೆಗಳಾದ ಸೆಂಟ್ರಲ್ ಸೇಫ್ಟಿ ಮಾನಿಟರಿಂಗ್ ಸೆಲ್, ಪ್ರೆಷರ್ ವೆಸೆಲ್ಸ್ ಅಂಡ್ ಪ್ಲಾಂಟ್ಸ್ ಸೇಫ್ಟಿ ಮಾನಿಟರಿಂಗ್ ಸೆಲ್, ಬಾಯ್ಲರ್ ಟೆಸ್ಟಿಂಗ್ ಟ್ರೈನಿಂಗ್ ಅಂಡ್ ಎಕ್ಸಾಮಿನೇಷನ್ ಸೆಲ್ ಮತ್ತು ಕರ್ನಾಟಕ ರಾಜ್ಯ ಸುರಕ್ಷತಾ ಸಂಸ್ಥೆ ಇವುಗಳ ಕಾರ್ಯಕ್ರಮಗಳು ಇಲಾಖೆಯ ಕಾರ್ಖಾನೆ ಮತ್ತು ಬಾಯ್ಲರುಗಳ ಅಪರ ನಿರ್ದೇಶಕರು ಹಾಗೂ ಜಂಟಿ ನಿರ್ದೇಶಕರುಗಳ ಉಸ್ತುವಾರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಅವುಗಳಿಗೆ ಇಲಾಖಾ ನಿರ್ದೇಶಕರೇ ಮುಖ್ಯಸ್ಥರು ಹಾಗೂ ಕಾರ್ಯದರ್ಶಿಗಳಾಗಿರುತ್ತಾರೆ. ಕೇಂದ್ರ ಕಛೇರಿಯಲ್ಲಿ 14 ಹಿರಿಯ/ಕಿರಿಯ ಅಧಿಕಾರಿಗಳಿದ್ದು, ಅವರುಗಳಿಗೆ ಈ ಕೆಳಗಿನಂತೆ ಅಧಿಕಾರ ಪ್ರತ್ಯಾಯೋಜನೆ, ಮೇಲುಸ್ತುವಾರಿಯನ್ನು ವಹಿಸಿಕೊಡಲಾಗಿರುತ್ತದೆ.

**ಈ ಕೆಳಕಂಡ ಅಧಿಕಾರಿಗಳು ನಿರ್ದೇಶಕರಿಗೆ ಆಡಳಿತಾತ್ಮಕ ಮತ್ತು ಶಾಸನಾತ್ಮಕ ಕೆಲಸ ಕಾರ್ಯಗಳಲ್ಲಿ ಸಹಕಾರವನ್ನು ನೀಡುತ್ತಿರುತ್ತಾರೆ.**

- ಕಾರ್ಖಾನೆ ಮತ್ತು ಬಾಯ್ಲರುಗಳ ಅಪರ ನಿರ್ದೇಶಕರು ಆಡಳಿತಾತ್ಮಕ ಹಾಗೂ ಶಾಸನಾತ್ಮಕ ವಿಷಯಗಳ ಬಗ್ಗೆ.
- ಕಾರ್ಖಾನೆಗಳ ಜಂಟಿ ನಿರ್ದೇಶಕರು (ವೈದ್ಯಕೀಯ) ಮತ್ತು ಒಬ್ಬರು ಔದ್ಯೋಗಿಕ ಆರೋಗ್ಯ ತಜ್ಞರು ಕಾರ್ಖಾನೆಗಳ ಕಾಯ್ದೆ 1948 ರಡಿಯಲ್ಲಿ ತಿಳಿಸಿರುವ ಔದ್ಯೋಗಿಕ ಆರೋಗ್ಯ ವಿಷಯಗಳ ಕುರಿತು.
- ಜಂಟಿ ನಿರ್ದೇಶಕರುಗಳು ಕಾರ್ಖಾನೆಗಳ ಕಾಯ್ದೆ ಹಾಗೂ ಸಂಬಂಧಿತ ಶಾಸನಗಳು, ಬಾಯ್ಲರುಗಳ ಕಾಯ್ದೆ ಹಾಗೂ ಸಂಬಂಧಿತ ಶಾಸನಗಳ ಜಾರಿ, ಅಕೌಂಟ್ಸ್, ಸಾಂಖ್ಯಿಕ ಮತ್ತು ರೆಕಾರ್ಡ್ ಮತ್ತು ದಾಸ್ತಾನು ವಿಷಯಗಳಲ್ಲಿ.
- ಆಡಳಿತಾಧಿಕಾರಿ ಸಾಮಾನ್ಯ ಆಡಳಿತದಲ್ಲಿ.
- ಬಾಯ್ಲರುಗಳ ಉಪ ನಿರ್ದೇಶಕರು (ಬಿಎಂಟಿಟಿ ಸೆಲ್) ಪ್ರಯೋಗಾಲಯ ವಿಷಯದಲ್ಲಿ.
- ಪತ್ರಾಂಕಿತ ವ್ಯವಸ್ಥಾಪಕರುಗಳು ಆಡಳಿತಾತ್ಮಕ ಮತ್ತು ಶಾಸನಾತ್ಮಕ ವಿಷಯಗಳಲ್ಲಿ.

### 3.2 ಕಛೇರಿಗಳು:–

ಇಲಾಖೆಯ ಕೇಂದ್ರ ಕಛೇರಿಯು 2ನೇ ಮಹಡಿ, ಕಲ್ಯಾಣ ಸುರಕ್ಷಾ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು– 560 029 ಇಲ್ಲಿ ಇದ್ದು, ಇಲಾಖೆಯಲ್ಲಿ ಹಾಲಿ ಒಟ್ಟು 48 ಕ್ಷೇತ್ರ/ವಿಭಾಗೀಯ ಕಛೇರಿಗಳಿವೆ. ಅವುಗಳಲ್ಲಿ 204 ಸಿಬ್ಬಂದಿ ಮತ್ತು 69 ಅಧಿಕಾರಿಗಳ ಹುದ್ದೆಗಳಿರುತ್ತವೆ.

**ಇಲಾಖೆಯ ವಲಯ ಮತ್ತು ವಿಭಾಗೀಯ (ಕ್ಷೇತ್ರ) ಕಛೇರಿಗಳು ಕಾರ್ಯನಿರ್ವಹಿಸುತ್ತಿರುವ ಸ್ಥಳಗಳ ವಿವರ ಕೆಳಗಿನಂತಿರುತ್ತದೆ:**

| ಸ್ಥಳ | ಕಛೇರಿಯ ಹೆಸರು | ಕಛೇರಿಗಳ ಸಂಖ್ಯೆ |
|---|---|---|
| ಬಳ್ಳಾರಿ | ಕಾರ್ಖಾನೆಗಳ ಜಂಟಿ ನಿರ್ದೇಶಕರು, ಬಳ್ಳಾರಿ ವಲಯ<br>ಕಾರ್ಖಾನೆಗಳ ಹಿರಿಯ ಸಹಾಯಕ ನಿರ್ದೇಶಕರು, ಬಳ್ಳಾರಿ | 01 ಕಛೇರಿ<br>01 ಕಛೇರಿ |
| ಬೆಂಗಳೂರು | ಕಾರ್ಖಾನೆಗಳ ಉಪ ನಿರ್ದೇಶಕರು<br>ಕಾರ್ಖಾನೆಗಳ ಹಿರಿಯ ಸಹಾಯಕ ನಿರ್ದೇಶಕರು<br>ಬಾಯ್ಲರುಗಳ ಹಿರಿಯ ಸಹಾಯಕ ನಿರ್ದೇಶಕರು | 05 ಕಛೇರಿಗಳು<br>05 ಕಛೇರಿಗಳು<br>02 ಕಛೇರಿಗಳು |

| | | |
|---|---|---|
| | ಕಾರ್ಖಾನೆಗಳ ಸಹಾಯಕ ನಿರ್ದೇಶಕರು<br>ಬಾಯ್ಲರುಗಳ ಸಹಾಯಕ ನಿರ್ದೇಶಕರು | 10 ಕಛೇರಿಗಳು<br>01 ಕಛೇರಿ |
| ಮೈಸೂರು | ಕಾರ್ಖಾನೆಗಳ ಉಪ ನಿರ್ದೇಶಕರು<br>ಕಾರ್ಖಾನೆಗಳ ಸಹಾಯಕ ನಿರ್ದೇಶಕರು<br>ಬಾಯ್ಲರುಗಳ ಸಹಾಯಕ ನಿರ್ದೇಶಕರು | 01 ಕಛೇರಿ<br>01 ಕಛೇರಿ<br>01 ಕಛೇರಿ |
| ಹುಬ್ಬಳ್ಳಿ | ಕಾರ್ಖಾನೆಗಳ ಹಿರಿಯ ಸಹಾಯಕ ನಿರ್ದೇಶಕರು<br>ಕಾರ್ಖಾನೆಗಳ ಸಹಾಯಕ ನಿರ್ದೇಶಕರು<br>ಬಾಯ್ಲರುಗಳ ಹಿರಿಯ ಸಹಾಯಕ ನಿರ್ದೇಶಕರು | 01 ಕಛೇರಿ<br>01 ಕಛೇರಿ<br>01 ಕಛೇರಿ |
| ಮಂಗಳೂರು | ಕಾರ್ಖಾನೆಗಳ ಉಪ ನಿರ್ದೇಶಕರು<br>ಕಾರ್ಖಾನೆಗಳ ಸಹಾಯಕ ನಿರ್ದೇಶಕರು<br>ಬಾಯ್ಲರುಗಳ ಸಹಾಯಕ ನಿರ್ದೇಶಕರು | 01 ಕಛೇರಿ<br>01 ಕಛೇರಿ<br>01 ಕಛೇರಿ |
| ಬೆಳಗಾವಿ | ಕಾರ್ಖಾನೆಗಳ ಉಪ ನಿರ್ದೇಶಕರು<br>ಬಾಯ್ಲರುಗಳ ಉಪ ನಿರ್ದೇಶಕರು<br>ಕಾರ್ಖಾನೆಗಳ ಸಹಾಯಕ ನಿರ್ದೇಶಕರು | 01 ಕಛೇರಿ<br>01 ಕಛೇರಿ<br>01 ಕಛೇರಿ |
| ದಾವಣಗೆರೆ | ಬಾಯ್ಲರುಗಳ ಉಪ ನಿರ್ದೇಶಕರು<br>ಕಾರ್ಖಾನೆಗಳ ಸಹಾಯಕ ನಿರ್ದೇಶಕರು | 01 ಕಛೇರಿ<br>01 ಕಛೇರಿ |
| ಕಲಬುರಗಿ | ಕಾರ್ಖಾನೆಗಳ ಹಿರಿಯ ಸಹಾಯಕ ನಿರ್ದೇಶಕರು<br>ಬಾಯ್ಲರುಗಳ ಹಿರಿಯ ಸಹಾಯಕ ನಿರ್ದೇಶಕರು | 01 ಕಛೇರಿ<br>01 ಕಛೇರಿ |
| ತುಮಕೂರು | ಕಾರ್ಖಾನೆಗಳ ಉಪ ನಿರ್ದೇಶಕರು | 01 ಕಛೇರಿ |
| ಶಿವಮೊಗ್ಗ | ಕಾರ್ಖಾನೆಗಳ ಸಹಾಯಕ ನಿರ್ದೇಶಕರು<br>ಬಾಯ್ಲರುಗಳ ಸಹಾಯಕ ನಿರ್ದೇಶಕರು | 01 ಕಛೇರಿ<br>01 ಕಛೇರಿ |
| ರಾಯಚೂರು | ಕಾರ್ಖಾನೆಗಳ ಸಹಾಯಕ ನಿರ್ದೇಶಕರು | 01 ಕಛೇರಿ |
| ಹಾಸನ | ಕಾರ್ಖಾನೆಗಳ ಸಹಾಯಕ ನಿರ್ದೇಶಕರು | 01 ಕಛೇರಿ |
| ಕೊಪ್ಪಳ | ಕಾರ್ಖಾನೆಗಳ ಸಹಾಯಕ ನಿರ್ದೇಶಕರು | 01 ಕಛೇರಿ |
| ಉಡುಪಿ | ಕಾರ್ಖಾನೆಗಳ ಸಹಾಯಕ ನಿರ್ದೇಶಕರು | 01 ಕಛೇರಿ |

ಮೇಲ್ಕಾಣಿಸಿದ ಎಲ್ಲಾ ಅಧಿಕಾರಿಗಳು ಪರಿವೀಕ್ಷಕರಾಗಿ ನೇಮಕಗೊಂಡಿದ್ದು, ಸಂಬಂಧಿಸಿದ ಕಾಯ್ದೆಗಳನ್ನು ಅನುಷ್ಠಾನ ಮಾಡುವ ಜೊತೆಗೆ, ಮಾಹಿತಿ ಹಕ್ಕು ಅಧಿನಿಯಮ 2005ರ ಅಡಿಯಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿಗಳಾಗಿಯೂ ಸಹ ಕಾರ್ಯನಿರ್ವಹಿಸುತ್ತಿರುತ್ತಾರೆ. ಇಲಾಖೆಗೆ ಮಂಜೂರಾಗಿರುವ ಒಟ್ಟು 273 ಹುದ್ದೆಗಳ ಪೈಕಿ ವಿವಿಧ ವೃಂದಗಳಲ್ಲಿ, ದಿ: 31-12-2020 ರಂತೆ, ಸುಮಾರು 137 ಹುದ್ದೆಗಳು ಖಾಲಿ ಇರುತ್ತವೆ (ಗ್ರೂಪ್ 'ಎ' – 05, ಗ್ರೂಪ್ 'ಬಿ' – 14, ಗ್ರೂಪ್ 'ಸಿ' – 80, ಗ್ರೂಪ್ 'ಡಿ' – 38) ಸುಮಾರು 43 ನೇರನೇಮಕಾತಿ ಹುದ್ದೆಗಳ ಶೀಘ್ರ ಭರ್ತಿಗಾಗಿ ಈಗಾಗಲೇ ಲೋಕಸೇವಾ ಆಯೋಗವು ಅಧಿಸೂಚನೆ ಹೊರಡಿಸಿರುತ್ತದೆ. ಇಲಾಖೆಯು ತೀವ್ರ ಸಿಬ್ಬಂದಿ ಕೊರತೆ ಎದುರಿಸುತ್ತಿರುವುದರಿಂದ ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ತಕ್ಷಣ ಭರ್ತಿ ಮಾಡುವ ಅನಿವಾರ್ಯತೆ ಇರುತ್ತದೆ. ಇಲಾಖೆಯ ಸಾಂಸ್ಥಿಕ ವ್ಯವಸ್ಥಾಪಟವನ್ನು (Organogram/Organisation Chart) "ಅನುಬಂಧ-ಅ" ರಲ್ಲಿ ನೀಡಿದೆ.

**4. ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ಶಾಸನಗಳು:**

**4.1. ಕಾರ್ಖಾನೆಗಳ ಕಾಯ್ದೆ, 1948**

- ಕರ್ನಾಟಕ ಕಾರ್ಖಾನೆಗಳ ನಿಯಮಾವಳಿಗಳು, 1969.
- ಮೇಜರ್ ಆಕ್ಸಿಡೆಂಟ್ ಹಜಾರ್ಡ್ ಕಂಟ್ರೋಲ್ (ಕರ್ನಾಟಕ) ನಿಯಮಗಳು, 1994.

**4.2 ವೇತನ ಸಂದಾಯ ಕಾಯ್ದೆ, 1936**

- **ಕರ್ನಾಟಕ ವೇತನ ಸಂದಾಯ ನಿಯಮಾವಳಿಗಳು, 1963.**

**4.3 ಪ್ರಸೂತಿ ಸೌಲಭ್ಯ ಕಾಯ್ದೆ, 1961**

- ಕರ್ನಾಟಕ ಪ್ರಸೂತಿ ಸೌಲಭ್ಯ ನಿಯಮಾವಳಿಗಳು, 1963.

**4.4 ಬಾಲ ಮತ್ತು ಕಿಶೋರಿ ಕಾರ್ಮಿಕ (ನಿಷೇದ ಮತ್ತು ನಿಯಂತ್ರಣ) ಕಾಯ್ದೆ, 1986.**

**4.5 ಪರಿಸರ (ಸಂರಕ್ಷಣೆ) ಕಾಯ್ದೆ 1986.**

- ರಾಸಾಯನಿಕ ಅಪಘಾತಗಳು (ತುರ್ತು ಪರಿಸ್ಥಿತಿ, ಪೂರ್ವ ಸಿದ್ಧತೆ ಹಾಗೂ ಪ್ರತಿಕ್ರಿಯೆ) ನಿಯಮಗಳು, 1996.
- ಅಪಾಯಕಾರಿ ರಾಸಾಯನಿಕಗಳ ತಯಾರಿಕೆ, ಶೇಖರಣೆ ಮತ್ತು ಆಮದು ನಿಯಮಾವಳಿಗಳು, 1989.

**4.6 ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ, 1996.**

25 ಕೋಟಿಗೂ ಹೆಚ್ಚಿನ ವೆಚ್ಚದ ಕಟ್ಟಡ ಹಾಗೂ ಇತರ ನಿರ್ಮಾಣ ಕಾಮಗಾರಿಗಳಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ, 1996 ಹಾಗೂ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ನಿಯಮಾವಳಿಗಳು 2006 ರ ನಿಯಮಾವಳಿಯಡಿಯಲ್ಲಿನ ಸುರಕ್ಷತೆ ಹಾಗೂ ಆರೋಗ್ಯದ ಪ್ರಾವಧಾನಗಳ ಅನುಷ್ಠಾನದ ಜವಾಬ್ದಾರಿಯನ್ನು ಇಲಾಖೆಗೆ ವಹಿಸಲಾಗಿರುತ್ತದೆ.

**4.7 ಬಾಯ್ಲರ್‌ಗಳ ಕಾಯ್ದೆ, 1923.**

- ಇಂಡಿಯನ್ ಬಾಯ್ಲರ್ ರೆಗ್ಯುಲೇಷನ್ – 1950.
- ಕರ್ನಾಟಕ ಬಾಯ್ಲರ್ ರೂಲ್ಸ್ – 1982.
- ಬಾಯ್ಲರ್ ಆಪರೇಷನ್ ಇಂಜಿನಿಯರ್ಸ್ ರೂಲ್ಸ್ – 2011.
- ಬಾಯ್ಲರ್ ಅಟೆಂಡೆಂಟ್ಸ್ ರೂಲ್ಸ್ – 2011.
- ಕರ್ನಾಟಕ ಎಕನಾಮೈಸರ್ಸ್ ರೂಲ್ಸ್ – 1959.

**5. ಇಲಾಖೆಯ ಮುಖ್ಯ ಕಾರ್ಯಚಟುವಟಿಕೆಗಳು :**

**5.1 ಕಾರ್ಖಾನೆಗಳ ವಿಭಾಗ:-**

- ಕಾರ್ಮಿಕರಿಗೆ ಸುರಕ್ಷತಾ ಮತ್ತು ಆರೋಗ್ಯಕರ ವಾತಾವರಣಗಳನ್ನು ಕಲ್ಪಿಸಲು, ಕಾರ್ಮಿಕರಿಗೆ ಅಗತ್ಯ ಕಲ್ಯಾಣ ಸೌಕರ್ಯಗಳನ್ನು ಒದಗಿಸಿರುವ ಬಗ್ಗೆ, ಸುತಮುತ್ತಲು ವಾಸಿಸುವ ನಾಗರೀಕರು ಮತ್ತು ಪರಿಸರಕ್ಕೆ ಧಕ್ಕೆಯಾಗದಂತೆ ಎಲ್ಲ ಅಂಶಗಳನ್ನು ಪರಿಶೀಲಿಸಿ ಹೊಸ ಕಾರ್ಖಾನೆಗಳ ಸ್ಥಾಪನೆ ಮತ್ತು ಕಾರ್ಖಾನೆಗಳ ವಿಸ್ತರಣೆಗೆ ಅನುಮತಿ ನೀಡುವುದು. ಕಾರ್ಖಾನೆಗಳ ಕಾಯ್ದೆಯಡಿಯಲ್ಲಿ ಒಳಪಡುವ ಎಲ್ಲಾ ಕಾರ್ಖಾನೆಗಳನ್ನು ನೋಂದಾಯಿಸಿ ಲೈಸನ್ಸ್ ನೀಡುವುದು.
- ನಿಯತಕಾಲಿಕವಾಗಿ ನೋಂದಾಯಿತ ಕಾರ್ಖಾನೆಗಳನ್ನು ಪರಿವೀಕ್ಷಿಸಿ ಕಾರ್ಮಿಕರ ಆರೋಗ್ಯ, ಸುರಕ್ಷತೆ, ಕಲ್ಯಾಣ ಸೌಲಭ್ಯಗಳು, ಕೆಲಸದ ವೇಳೆ ಇತ್ಯಾದಿ ಪ್ರಾವಧಾನಗಳನ್ನು ಪಾಲಿಸುತ್ತಿರುವ ಬಗ್ಗೆ ಪರಿಶೀಲಸಿ ಅನುಷ್ಠಾನಗೊಳಿಸುವುದು. ಕಾನೂನು ಪಾಲಿಸದ ಕಾರ್ಖಾನೆಗಳ ವಿರುದ್ಧ ಸಕ್ಷಮ ನ್ಯಾಯಾಲಯಗಳಲ್ಲಿ ಮೊಕದ್ದಮೆಗಳನ್ನು ಹೂಡುವ ಕಾನೂನು ಕ್ರಮ ಜರುಗಿಸುವುದು.

- ಕಾರ್ಖಾನೆಗಳಲ್ಲಿ ಸಂಭವಿಸುವ ಅಪಘಾತಗಳ ತನಿಖೆ ನಡೆಸುವುದು.
- ಇಲಾಖೆಯು ನೀಡುತ್ತಿರುವ ಸೇವೆಗಳಾದ ಕಾರ್ಖಾನೆಗಳ ನೊಂದಾವಣೆ, ಲೈಸನ್ಸ್ ನವೀಕರಣ/ತಿದ್ದುಪಡಿ/ವರ್ಗಾವಣೆ, ನಕ್ಷಾನುಮೋದನೆ ಇತ್ಯಾದಿ ಸೇವೆಗಳನ್ನು ತ್ವರಿತವಾಗಿ, ಕಾಗದರಹಿತವಾಗಿ ಹಾಗೂ ಪಾರದರ್ಶಕವಾಗಿ ಆನ್‌ಲೈನ್ ಮುಖಾಂತರ ಭಾಗೀದಾರರಿಗೆ ನೀಡುವುದು.
- ಕಾರ್ಖಾನೆಗಳ ಕಾರ್ಮಿಕರಿಗೆ, ಮೇಲ್ವಿಚಾರಕರಿಗೆ, ಆಡಳಿತವರ್ಗದವರಗೆ ಔದ್ಯೋಗಿಕ ಆರೋಗ್ಯ ಮತ್ತು ಸುರಕ್ಷತೆ, ಅಪಘಾತಗಳ ನಿಯಂತ್ರಣ, ಮತ್ತು ಅವರ ಹಕ್ಕು ಮತ್ತು ಕರ್ತವ್ಯಗಳ ಬಗ್ಗೆ ತರಬೇತಿ, ಕಾರ್ಯಾಗಾರ / ವಿಚಾರ ಸಂಕಿರಣ ಇತ್ಯಾದಿ ಕಾರ್ಯಕ್ರಮಗಳ ಮೂಲಕ ಅರಿವು ಮೂಡಿಸುವುದು.
- ಅಪಾಯಕಾರಿ ಕಾರ್ಖಾನೆಗಳಲ್ಲಿ ವಿಪತ್ತುಗಳ ನಿಯಂತ್ರಣೆ ಮತ್ತು ನಿರ್ವಹಣೆಯ ಬಗ್ಗೆ ಮಾಕ್ ಡ್ರಿಲ್ (ಅಣಕು ಪ್ರದರ್ಶನ) ಗಳನ್ನು ನಡೆಸಿ ಕಾರ್ಖಾನೆಯನ್ನು ತುರ್ತು ವಿಪತ್ತು ಕಾರ್ಯಾಚರಣೆಗೆ ಸಮರ್ಥಗೊಳಿಸುವುದು.
- ಕಾರ್ಮಿಕರಿಂದ, ಕಾರ್ಮಿಕ ಸಂಘ ಸಂಸ್ಥೆಗಳಿಂದ ಹಾಗೂ ಸಾರ್ವಜನಿಕರಿಂದ ಸ್ವೀಕರಿಸಲ್ಪಟ್ಟ ದೂರುಗಳನ್ನು ತನಿಖೆ ಮಾಡಿ ಪರಿಹಾರ ಒದಗಿಸಿಕೊಡುವುದು.
- ಕಾರ್ಖಾನೆಗಳಲ್ಲಿ ಬಳಸುವ ಅಪಾಯಕಾರಿ ಯಂತ್ರಗಳನ್ನು ಪರೀಕ್ಷೆ ಮಾಡಿ ದೃಢೀಕರಿಸಲು ಧೃಢೀಕೃತ ವ್ಯಕ್ತಿಗಳನ್ನು ಗುರುತಿಸಿ ಪರವಾನಿಗೆ ನೀಡುವುದು.
- ಅಪಾಯಕಾರಿ ಕಾರ್ಯಾಚರಣೆ ಹೊಂದಿರುವ ಘಟಕಗಳ ಕಾರ್ಯಾಚರಣೆ ಕುರಿತು ಕಡ್ಡಾಯವಾಗಿ ತಿಳಿಸಬೇಕಾಗಿರುವ ಮಾಹಿತಿಯನ್ನು ಸಲ್ಲಿಸಲು ಸೂಕ್ತ ವಿಧಾನಗಳನ್ನು ನಿಗಧಿಪಡಿಸುವುದು.
- ಆಡಳಿತವರ್ಗದವರಿಗೆ ಸುರಕ್ಷತಾ ನೀತಿ, ಆನ್-ಸೈಟ್ ಎಮರ್ಜೆನ್ಸಿ ಪ್ಲಾನ್ ತಯಾರಿಕೆ ಹಾಗೂ ತುರ್ತು ಪರಿಸ್ಥಿತಿಯಲ್ಲಿ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಕುರಿತು ಮಾರ್ಗದರ್ಶನ ನೀಡುವುದು.
- ಜಿಲ್ಲಾಡಳಿತಕ್ಕೆ ಜಿಲ್ಲೆಯ ಆಫ್-ಸೈಟ್ ಎಮರ್ಜೆನ್ಸಿ ಪ್ಲಾನ್ ಹಾಗೂ ಜಿಲ್ಲಾ ವಿಪತ್ತು ನಿರ್ವಹಣಾ ಪ್ಲಾನ್ ತಯಾರಿಕೆಯಲ್ಲಿ ಮತ್ತು ಅದರ ಅನುಷ್ಠಾನದಲ್ಲಿ ಸಹಕರಿಸುವುದು.
- ನೋಂದಾಯಿತ ಕಾರ್ಖಾನೆಗಳಲ್ಲಿ ಕೆಲಸ ನಿರ್ವಹಿಸುವ ಕಾರ್ಮಿಕರಿಗೆ ವೇತನವನ್ನು ಸಕಾಲದಲ್ಲಿ ಪಾವತಿಸುತ್ತಿರುವ ಕುರಿತು ನಿಗಾವಹಿಸುವುದು.
- ಅರ್ಹ ಮಹಿಳಾ ಕಾರ್ಮಿಕರಿಗೆ ಪ್ರಸೂತಿ ಸೌಲಭ್ಯಗಳನ್ನು ನೀಡಿರುವ ಬಗ್ಗೆ ನಿಗಾ ವಹಿಸುವುದು.
- ನೋಂದಣಿಯಾಗಿಲ್ಲದ ಕಾರ್ಖಾನೆಗಳನ್ನು ಪತ್ತೆ ಮಾಡಿ, ಕಾರ್ಖಾನೆಗಳ ಕಾಯ್ದೆ ವ್ಯಾಪ್ತಿಯಡಿ ನೋಂದಣಿ ಮಾಡಲು ಕ್ರಮ ತೆಗೆದುಕೊಳ್ಳುವುದು.
- ಮುಚ್ಚಿರುವ / ಸ್ಥಳಾಂತರಗೊಂಡಿರುವ ಕಾರ್ಖಾನೆಗಳನ್ನು ಗುರುತಿಸಿ, ಲೈಸೆನ್ಸ್ ವಜಾ ಮಾಡಿ ಕಾರ್ಖಾನೆಗಳ ಪಟ್ಟಿಯಿಂದ ಅಂತಹ ಕಾರ್ಖಾನೆಗಳನ್ನು ತೆಗೆಯಲು ಕ್ರಮ ಕೈಗೊಳ್ಳುವುದು.
- ಕಾರ್ಖಾನೆಗಳಿಂದ ಅರ್ಧ ವಾರ್ಷಿಕ / ವಾರ್ಷಿಕ ವರದಿಗಳನ್ನು ಸಂಗ್ರಹಿಸಿ, ಮಾಹಿತಿಯನ್ನು ಕ್ರೋಢೀಕರಿಸಿ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಹಾಗೂ ಇತರ ಸಂಸ್ಥೆಗಳಿಗೆ ಅವಶ್ಯ ಅಂಕಿ ಅಂಶಗಳನ್ನು ಒದಗಿಸುವುದು.
- 25 ಕೋಟಿಗಿಂತ ಹೆಚ್ಚಿನ ವೆಚ್ಚದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ಕಟ್ಟಡ ಕಾರ್ಮಿಕರ ಸುರಕ್ಷತೆ ಹಾಗೂ ಆರೋಗ್ಯದ ಕುರಿತು ಪರಿವೀಕ್ಷಣೆಗಳನ್ನು ಮಾಡುವುದು ಮತ್ತು ನಿಯಮಗಳನ್ನು ಅನುಷ್ಠಾನಗೊಳಿಸುವುದು.
- ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳ ಕಾಯ್ದೆ, 1996 ಜಾರಿ ಬಗ್ಗೆ ಅರಿವು ಮೂಡಿಸಲು ಭಾಗೀದಾರರುಗಳಾದ ಬಿಲ್ಡರ್ಸ್, ಡೆವಲಪರ್ಸ್, ಗುತ್ತಿಗೆದಾರರು, ಇವರುಗಳಿಗೆ ವಿಚಾರ ಸಂಕಿರಣಗಳನ್ನು ಏರ್ಪಡಿಸಿ ನಡೆಸುವ ಮುಖಾಂತರ ಅರಿವು ಮೂಡಿಸುವುದು.

**5.2 ಬಾಯ್ಲರುಗಳ ವಿಭಾಗ:-**

- ಬಾಯ್ಲರುಗಳ ಕಾಯ್ದೆ ಅಡಿ ಬರುವ ಎಲ್ಲಾ ಬಾಯ್ಲರು / ಎಕನಾಮೈಸರ್ / ಹಬೆಕೊಳವೆಗಳನ್ನು ನೊಂದಾಯಿಸುವುದು.
- ಬಾಯ್ಲರ್ / ಎಕನಾಮೈಸರ್ / ಹಬೆಕೊಳವೆಗಳ ಕಾರ್ಯ ಕ್ಷಮತೆಯನ್ನು ನಿಯತಕಾಲಿಕವಾಗಿ ಪರಿವೀಕ್ಷಿಸಿ, ದೈನಂದಿನ ಉಪಯೋಗಕ್ಕೆ ಪ್ರಮಾಣೀಕರಿಸುವುದು.

- ಬಾಯ್ಲರ್ / ಬಾಯ್ಲರ್ ಕಾಂಪೋನೆಂಟ್ಸ್ / ಹಬೆಕೊಳವೆಗಳ ತಯಾರಿಕ ಹಂತದಲ್ಲಿ ನಿಯತಕಾಲಿಕವಾಗಿ ಪರಿವೀಕ್ಷಿಸಿ, ಅವುಗಳ ಸುರಕ್ಷಿತ ಬಳಕೆಗೆ ಪ್ರಮಾಣೀಕರಿಸುವುದು.
- ಬಾಯ್ಲರ್ / ಎಕನಾಮೈಸರ್ / ಹಬೆಕೊಳವೆಗಳ ದುರಸ್ತಿಯನ್ನು ಇಲಾಖೆಯ ಮಾನ್ಯತೆ ಪಡೆದ ದುರಸ್ತಿದಾರರಿಂದಲೇ ಮಾಡಿಸುವ ಬಗ್ಗೆ ಆಡಳಿತವರ್ಗದವರಿಗೆ ಸಲಹೆಯನ್ನು ನೀಡಿ, ದುರಸ್ತಿ ಹಂತದಲ್ಲಿ ಉಸ್ತುವಾರಿ ವಹಿಸಿ, ನಿಯಮ ಪಾಲನೆ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು.
- ಬಾಯ್ಲರ್ / ಎಕನಾಮೈಸರ್ / ಹಬೆಕೊಳವೆಗಳಲ್ಲಿ ಅಪಘಾತ ಸಂಭವಿಸಿದಲ್ಲಿ, ಆ ಬಗ್ಗೆ ತನಿಖೆ ಕೈಗೊಳ್ಳುವುದು.
- ಇಂಡಿಯನ್ ಬಾಯ್ಲರ್ ರೆಗ್ಯುಲೇಷನ್ 1950 ರಲ್ಲಿ ನಿಗದಿಪಡಿಸಿರುವಂತೆ ವೆಲ್ಡರ್ ಪರೀಕ್ಷೆ ನಡೆಸಿ, ಅರ್ಹ ಅಭ್ಯರ್ಥಿಗಳಿಗೆ ಪ್ರಮಾಣಪತ್ರ ವಿತರಿಸುವುದು.
- ಬಾಯ್ಲರ್ ಆಪರೇಷನ್ ಇಂಜಿನಿಯರ್ಸ್ / ಬಾಯ್ಲರ್ ಅಟೆಂಡೆಂಟ್ ನಿಯಮಗಳನ್ನು ಅನುಷ್ಠಾನಗೊಳಿಸುವುದು ಸದರಿ ನಿಯಮಗಳಡಿ ಅರ್ಹ ಅಭ್ಯರ್ಥಿಗಳ ಆಯ್ಕೆಗಾಗಿ ಪರೀಕ್ಷೆಗಳನ್ನು ನಡೆಸುವುದು.
- ಬಾಯ್ಲರ್ / ಎಕನಾಮೈಸರ್ / ಹಬೆಕೊಳವೆಗಳ ತಯಾರಿಕ ಮತ್ತು ಸ್ಥಾಪನೆ ಸಂಬಂಧ ವಿನ್ಯಾಸ ಮತ್ತು ನಕ್ಷೆಗಳನ್ನು ಪರಿಶೀಲಿಸಿ ಅನುಮೋದಿಸುವುದು.
- ಬಾಯ್ಲರ್ / ಎಕನಾಮೈಸರ್ / ಹಬೆಕೊಳವೆಗಳ ಸ್ಥಾಪನೆಯ ಮತ್ತು ತಯಾರಿಕೆಯ ಸಮಯದಲ್ಲಿ ಹಂತ ಪರಿವೀಕ್ಷಣೆ ಕೈಗೊಳ್ಳುವುದು.
- ಬಾಯ್ಲರನ್ನು ಸುರಕ್ಷಿತವಾಗಿ ಮತ್ತು ದಕ್ಷವಾಗಿ ನಿರ್ವಹಿಸುವ ಕುರಿತು ಬಾಯ್ಲರ್ ಉಪಯೋಗದಾರರು, ಬಾಯ್ಲರ್ ಅಟೆಂಡೆಂಟ್ ಮತ್ತು ಆಪರೇಷನ್ ಇಂಜಿನಿಯರುಗಳಿಗೆ ತರಬೇತಿ ನೀಡುವುದು.
- ಬಾಯ್ಲರ್‌ನ ಸುರಕ್ಷಿತ ಸ್ಥಾಪನೆ ಮತ್ತು ದುರಸ್ತಿ ಸಂಬಂಧ ತಯಾರಕರಿಗೆ / ಸ್ಥಾಪನೆದಾರರಿಗೆ / ದುರಸ್ತಿದಾರರಿಗೆ ತರಬೇತಿ ನೀಡುವುದು.

## ಅಧ್ಯಾಯ – 2

**ಇಲಾಖೆಯ ಕಾರ್ಯನಿರ್ವಹಣೆ ವಿವರ:–**

**1. ಕಾರ್ಖಾನೆಗಳ ವಿಭಾಗ:–**

ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯು ಒಂದು ರೆಗ್ಯುಲೇಟರಿ (ನಿಯಂತ್ರಣ) ಸ್ವರೂಪದ ಇಲಾಖೆಯಾಗಿದ್ದು, ಇದು ಕಾರ್ಖಾನೆಗಳಲ್ಲಿನ ಕಾರ್ಮಿಕರ ಸುರಕ್ಷತೆ, ಆರೋಗ್ಯ ಮತ್ತು ಕಲ್ಯಾಣ ಕುರಿತಂತೆ ವಿವಿಧ ಕಾರ್ಮಿಕ ಕಾನೂನುಗಳನ್ನು ಜಾರಿಗೊಳಿಸುತ್ತಿದೆ. ರಾಜ್ಯದಲ್ಲಿ ಪ್ರಸ್ತುತ ಸುಮಾರು 16,917 ನೋಂದಾಯಿತ ಕಾರ್ಖಾನೆಗಳು ಕಾರ್ಯನಿರ್ವಹಿಸುತ್ತಿದೆ. ಈ ಕಾರ್ಖಾನೆಗಳಲ್ಲಿ ಸುಮಾರು 16,55,617 ಕಾರ್ಮಿಕರು ದುಡಿಯುತ್ತಿದ್ದಾರೆ. ರಾಜ್ಯದಲ್ಲಿ 1398 ಅಪಾಯಕಾರಿ ಹಾಗೂ 80 ಅತೀ ಅಪಾಯಕಾರಿ ಕಾರ್ಖಾನೆಗಳಿರುತ್ತವೆ.

"ಸುರಕ್ಷತೆಯನ್ನು ಮಾನವ ಹಕ್ಕು ಎಂದು ಪರಿಗಣಿಸಲಾಗಿದ್ದು, ಇದರ ನೇರ ಸೌಲಭ್ಯವನ್ನು ಪಡೆಯಲಿರುವ ಪ್ರಮುಖ ಭಾಗೀದಾರರಾದ ಕಾರ್ಮಿಕ ವರ್ಗದವರಲ್ಲಿ ಈ ಕುರಿತು ತಿಳುವಳಿಕೆ ಹೆಚ್ಚುತ್ತಿದೆ." ಈ ದಿಕ್ಕಿನಲ್ಲಿ ಸುರಕ್ಷಿತ ಕಾರ್ಯಸ್ಥಳವನ್ನು ಸ್ಥಾಪಿಸುವುದು ಇಲಾಖೆಯ ಪ್ರಮುಖ ಧ್ಯೇಯವಾಗಿರುತ್ತದೆ. ಔದ್ಯೋಗಿಕ ಅಪಘಾತಗಳು / ದುರಂತಗಳನ್ನು ತಡೆಗಟ್ಟುವ ಗುರಿಯೊಂದಿಗೆ ಕಾರ್ಖಾನೆಗಳಲ್ಲಿ ಅಸುರಕ್ಷಿತ ಕಾರ್ಯವಿಧಾನಗಳನ್ನು, ಅಸುರಕ್ಷಿತ ಕಾರ್ಯಸ್ಥಿತಿಗಳನ್ನು ನಿಯತಕಾಲಿಕ ಪರಿವೀಕ್ಷಣೆಗಳಲ್ಲಿ ಗುರುತಿಸಬೇಕಾಗಿರುತ್ತದೆ. ಈ ಧ್ಯೇಯೋದ್ದೇಶಗಳನ್ನು ಸಾಧಿಸಲು ಇಲಾಖೆಯು ತನ್ನ ಪ್ರಾಥಮಿಕ ಕರ್ತವ್ಯವಾದ ನಿಯತಕಾಲಿಕ ಪರಿವೀಕ್ಷಣೆಗಳ ಜೊತೆಯಲ್ಲಿ ಕಾರ್ಮಿಕರಿಗೆ ಹಾಗೂ ಕಾರ್ಖಾನೆಯ ಮಾಲೀಕ ವರ್ಗದವರಿಗೆ ಸುರಕ್ಷತೆ ಹಾಗೂ ಆರೋಗ್ಯದ ವಿಚಾರಗಳಲ್ಲಿ ತರಬೇತಿ ನೀಡುವತ್ತ ತನ್ನ ದೃಷ್ಟಿಕೋನವನ್ನು ಬದಲಿಸಿದೆ. ಇದರಿಂದ ಕಾರ್ಖಾನೆಗಳ ಆಡಳಿತ ವರ್ಗದವರಲ್ಲಿ ಮತ್ತು ಕಾರ್ಮಿಕ ವರ್ಗದಲ್ಲಿ ಸುರಕ್ಷತೆ ಹಾಗೂ ಆರೋಗ್ಯದ ಕುರಿತು ಅರಿವು ಮೂಡಿಸಿ, ಗುರಿಯನ್ನು ಸಾಧಿಸಲು ಶ್ರಮಿಸಲಾಗುತ್ತಿದೆ. ಇಲಾಖೆಯು ಒದಗಿಸುವ ಅನೇಕ ಸೇವೆಗಳನ್ನು, ಅಂದರೆ ಕಾರ್ಖಾನೆಗಳ ನಕ್ಷಾನುಮೋದನೆ, ನೋಂದಣಿ, ಲೈಸೆನ್ಸ್ ತಿದ್ದುಪಡಿ, ಲೈಸೆನ್ಸ್ ವರ್ಗಾವಣೆ, ಲೈಸೆನ್ಸ್ ನವೀಕರಣ, ಕಾರ್ಖಾನೆಯ ವಿಸ್ತರಣೆಗೆ ಸಂಬಂಧಿಸಿದಂತೆ ಅನುಮೋದನೆಗಳನ್ನು ಸಕಾಲ ಯೋಜನೆಯ ವ್ಯಾಪ್ತಿಯಲ್ಲಿ ತರಲಾಗಿದ್ದು, ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಹಾಗೂ ಶುಲ್ಕ ಪಾವತಿಯನ್ನು (ಇ–ಪೇಮೆಂಟ್) ಆನ್‌ಲೈನ್ ಮುಖಾಂತರ ಪಡೆಯುವ ಮೂಲಕ ತ್ವರಿತ, ಪಾರದರ್ಶಕ ಮತ್ತು ಸುಲಲಿತ ಸೇವೆಯನ್ನು ನೀಡುವಲ್ಲಿ ಕ್ರಮವಹಿಸಿದೆ.

1.1 **ಕಾರ್ಯಚಟುವಟಿಕೆಗಳು ಮತ್ತು ಸಾಧನೆಗಳು:–**

ಕಾರ್ಖಾನೆಗಳ ಪರಿವೀಕ್ಷಣೆಗಳಿಗೆ ಹಾಗೂ ತರಬೇತಿ ಕಾರ್ಯಕ್ರಮಗಳಿಗೆ ಗುರಿಗಳನ್ನು ನಿಗಧಿಪಡಿಸಲಾಗಿರುತ್ತದೆ. ಇಲಾಖೆಯ ತನ್ನ ಹಲವು ಸೇವೆಗಳಿಗೆ, ಸಾರ್ವಜನಿಕರಿಗೆ ಅನುಕೂಲವಾಗುವಂತೆ ಸೇವೆಯನ್ನು ನೀಡುವ ಕಾಲಮಿತಿಯನ್ನು ನಿಗಧಿಪಡಿಸಿರುತ್ತದೆ, ಅದರಂತೆ ಅರ್ಜಿಗಳನ್ನು ನಿಗಧಿತ ಅವಧಿಯಲ್ಲಿ ವಿಲೇವಾರಿ ಮಾಡಲಾಗುತ್ತಿದೆ. 2020ನೇ ಸಾಲಿನ ಸಾಧನೆಯ ಅಂಕಿ ಅಂಶಗಳನ್ನು **ಅನುಬಂಧ "ಅ"** ರಲ್ಲಿ ನೀಡಲಾಗಿದೆ.

**1.2 2019–20ನೇ ಸಾಲಿಗೆ ಮುಂದುವರೆದ ಯೋಜನೆಗಳು:**

**"ಇ–ಸುರಕ್ಷತೆ–II":–**

ಇಲಾಖೆಯ ಆನ್–ಲೈನ್ ಸೇವೆಗಳನ್ನು ಇನ್ನೂ ಹೆಚ್ಚು ತ್ವರಿತವಾಗಿ, ದೋಷರಹಿತವಾಗಿ ಒದಗಿಸಲು ಮತ್ತು ಅರ್ಜಿಗಳ ವಿಲೇವಾರಿ ಹಂತಗಳನ್ನು ಭಾಗೀದಾರರ ಗಮನಕ್ಕೆ ತರುವ ಹಾಗು ಇಲಾಖೆಯ ಎಲ್ಲಾ ವ್ಯವಹಾರಗಳನ್ನು ಕಾಗದ ರಹಿತವಾಗಿ ತರಲು, ಈ ಯೋಜನೆ ಮೂಲಕ ಸಂಪೂರ್ಣ ಇಲಾಖೆಯ ಎಲ್ಲ ವಿಭಾಗಗಳ ಕೆಲಸಗಳನ್ನು ಡಿಜಿಟಲೀಕರಣಗೊಳಿಸಲು ಉದ್ದೇಶಿಸಲಾಗಿರುತ್ತದೆ. ಈ ಸಂಬಂಧ ಇಲಾಖೆಯ ಎಲ್ಲಾ ಸಕಾಲ ಯೋಜನೆಯಡಿಯಲ್ಲಿನ ಸೇವೆಗಳಿಗೆ ಕಾಗದರಹಿತ ಆನ್–ಲೈನ್ ಸೇವಾ ವಿಧಾನವನ್ನು ತರಲು ಕ್ರಮವಹಿಸಲಾಗಿದೆ.

**"ಅಪಾಯಕಾರಿ ಕಾರ್ಖಾನೆಗಳ ನಿಗಾ ಕೋಶ":-**

ಅಪಾಯಕಾರಿ ರಾಸಾಯನಿಕಗಳಿಂದ ಸಂಭವಿಸಬಹುದಾದ ವಿಪತ್ತನ್ನು ನಿಯಂತ್ರಿಸಿ ಪರಿಸರಕ್ಕೆ, ಕಾರ್ಮಿಕರ ಹಾಗೂ ಸಾರ್ವಜನಿಕರ ಆರೋಗ್ಯಕ್ಕೆ ಹಾನಿಯಾಗುವುದನ್ನು ತಡೆಯಲು ಈ ಕೋಶವನ್ನು ಸ್ಥಾಪಿಸಲಾಗಿರುತ್ತದೆ.

## 1.3 ಕರ್ನಾಟಕ ರಾಜ್ಯ ಸುರಕ್ಷತಾ ಸಂಸ್ಥೆ (ನೋಂ.) (ಸ್ಥಾಪನೆ 1985)

**ಸಂಸ್ಥೆಯ ಉದ್ದೇಶ:-**

ಉದ್ಯಮಿಗಳಿಗೆ ತೊಂದರೆ ಅಥವಾ ಹಾನಿಯಾಗದಂತೆ, ಸುರಕ್ಷತಾ ಗುಣಮಟ್ಟಗಳನ್ನು ಕೈಗಾರಿಕೆಗಳಲ್ಲಿ ಅಳವಡಿಸಿ ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಹೆಚ್ಚಿನ ಗಮನಹರಿಸುವುದು ಅವಶ್ಯವಾಗಿದೆ. ದುಡಿಮೆಯ ಪರಿಸರ ಮತ್ತು ಸುರಕ್ಷತಾ ಕ್ಷೇತ್ರದಲ್ಲಿನ ತಿಳುವಳಿಕೆಯನ್ನು ಪರಿಣಾಮಕಾರಿಯಾದ ಶಿಕ್ಷಣ ಮತ್ತು ಸಂವಹನದ ಮೂಲಕ ಪ್ರಚಾರ ಮಾಡುವುದು, ದುಡಿಯುವ ವರ್ಗದ ಜನರನ್ನು ಮಾನಸಿಕವಾಗಿ ಪುನಶ್ಚೇತನಗೊಳಿಸಲು ಒಂದು ಪರಿಣಾಮಕಾರಿ ಪರಿಕರವಾಗಿ ಪರಿಗಣಿಸಲಾಗಿದೆ. ಸಂಸ್ಥೆಯ ಮುಖ್ಯ ಧ್ಯೇಯೋದ್ದೇಶಗಳು, ಸುರಕ್ಷತೆ ಮತ್ತು ಆರೋಗ್ಯ ಅಭಿಯಾನ ಕೈಗೊಂಡು, ಸುರಕ್ಷತಾ ಕಾರ್ಯಚಟುವಟಿಕೆಗಳನ್ನು ಅಳವಡಿಸಿಕೊಂಡು ಅಪಘಾತರಹಿತ ಉತ್ಪಾದನಾ ಕಾರ್ಯ ಚಟುವಟಿಕೆಗಳನ್ನು ಉತ್ತೇಜಿಸುವುದಾಗಿದೆ. ಈ ಸಂಸ್ಥೆಯನ್ನು ಸರ್ಕಾರದ ಆದೇಶಕ್ಕನುಗುಣವಾಗಿ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರಡಿಯಲ್ಲಿ ಸಂಘವನ್ನಾಗಿ 2008ನೇ ಸಾಲಿಗೆ ನೋಂದಾಯಿಸಿ ಪ್ರಮಾಣ ಪತ್ರ ಪಡೆಯಲಾಗಿದೆ. (ನೋಂದಣಿ ಸಂಖ್ಯೆ: 186/2007-08, ದಿ: 31.03.2008)

**ಚಟುವಟಿಕೆಗಳು:-**

ಸಂಸ್ಥೆಯು ಕಾರ್ಖಾನೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರ ಸುರಕ್ಷತೆ, ಆರೋಗ್ಯ ಮತ್ತು ಕೆಲಸದ ವಾತಾವರಣದ ಬಗ್ಗೆ ಅರಿವು ಮೂಡಿಸಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕಾರ್ಯನಿರ್ವಹಿಸುತ್ತಿದೆ. ಇವುಗಳಲ್ಲಿ ಬಹುಮುಖ್ಯವಾಗಿ ಕಾರ್ಖಾನೆಗಳ ಆವರಣದಲ್ಲಿಯೇ ಕಾರ್ಮಿಕರಿಗೆ / ಮೇಲ್ವಿಚಾರಕರಿಗೆ ಒಂದು ದಿನದ ಸುರಕ್ಷತಾ ತರಬೇತಿ ಕಾರ್ಯಕ್ರಮಗಳನ್ನು ಹಾಗೂ ಕಾರ್ಖಾನೆಯ ಆಡಳಿತವರ್ಗದವರು ಮತ್ತು ಹಿರಿಯ ಅಧಿಕಾರಿಗಳಿಗೆ ಕಾನೂನು, ಸುರಕ್ಷತೆ, ಆರೋಗ್ಯ, ವ್ಯಕ್ತಿತ್ವ ವಿಕಸನ ಇತ್ಯಾದಿ ವಿಷಯಗಳಿಗೆ ಸಂಬಂಧಪಟ್ಟಂತೆ ವಿಚಾರ ಸಂಕಿರಣ / ಕಾರ್ಯಗಾರ ನಡೆಸುವುದಾಗಿದೆ. ಕಾರ್ಖಾನೆಗಳಲ್ಲಿ ಕಾರ್ಮಿಕರ ಹಿತರಕ್ಷಣೆಯನ್ನು ಕಾಪಾಡುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಸುರಕ್ಷತಾಧಿಕಾರಿಗಳು, ಕಲ್ಯಾಣಾಧಿಕಾರಿಗಳು, ಸಿಬ್ಬಂದಿ ಅಧಿಕಾರಿಗಳು ಮತ್ತು ವೈದ್ಯಾಧಿಕಾರಿಗಳಿಗೆ ನಿಯಮಾನುಸಾರ ಇರುವ ಅವರ ಜವಾಬ್ದಾರಿ ಮತ್ತು ಕರ್ತವ್ಯಗಳ ಬಗ್ಗೆ ಮನದಟ್ಟು ಮಾಡುವ ತರಬೇತಿ ಕಾರ್ಯಕ್ರಮಗಳನ್ನು ಸಹ ಸಂಸ್ಥೆಯ ವತಿಯಿಂದ ನಡೆಸಿಕೊಡಲಾಗುತ್ತಿದೆ. ಅಲ್ಲದೇ ಕಾರ್ಖಾನೆಗಳ ಅಪೇಕ್ಷೆಗನುಗುಣವಾಗಿ ಪಠ್ಯಕ್ರಮ ವಿನ್ಯಾಸಗೊಳಿಸಿ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತದೆ.

**49ನೇ ರಾಷ್ಟ್ರೀಯ ಸುರಕ್ಷತಾ ದಿನಾಚರಣೆಯ ವಿವರಗಳು:**

49ನೇ ರಾಷ್ಟ್ರೀಯ ಸುರಕ್ಷತಾ ದಿನಾಚರಣೆಯನ್ನು 04ನೇ ಮಾರ್ಚ್ 2020ರಂದು ಬೆಂಗಳೂರಿನ ಸೇಂಟ್ ಜಾನ್ಸ್ ಆಡಿಟೋರಿಯಂನಲ್ಲಿ ಆಯೋಜಿಸಲಾಗಿತ್ತು. ಸುರಕ್ಷತಾ ದಿನಾಚರಣೆಯ ಅಂಗವಾಗಿ "Shaping the future of Occupational Safety and Health" ವಿಷಯದ ಬಗ್ಗೆ ವಿಚಾರ ಸಂಕಿರಣವನ್ನು ಆಯೋಜಿಸಲಾಗಿದ್ದು, ಸುಮಾರು 1200 ಅಭ್ಯರ್ಥಿಗಳು ಹಾಜರಾಗಿ ಅದರ ಪ್ರಯೋಜನ ಪಡೆದಿರುತ್ತಾರೆ. ಸದರಿ ಸ್ಥಳದಲ್ಲಿ ಸುರಕ್ಷತಾ ಸಾಧನಗಳ ವಸ್ತು ಪ್ರದರ್ಶನ ಏರ್ಪಡಿಸಿದ್ದು, ಅಭ್ಯರ್ಥಿಗಳು ಅದರ ಪ್ರಯೋಜನ ಪಡೆದಿರುತ್ತಾರೆ. ಸುರಕ್ಷತಾ ಧ್ವಜಾರೋಹಣ ಮತ್ತು ಸುರಕ್ಷತಾ ವಾಗ್ದಾನದೊಂದಿಗೆ ಪ್ರಾರಂಭಗೊಂಡು ಕಾರ್ಯಕ್ರಮದ ಅಂಗವಾಗಿ ಸಾರ್ವಜನಿಕ ಸಮಾರಂಭ ಮತ್ತು ಪ್ರಶಸ್ತಿ ಪ್ರಧಾನ ಸಮಾರಂಭ ಏರ್ಪಡಿಸಿದ್ದು, ಕಾರ್ಮಿಕ ಮತ್ತು ಸಕ್ಕರೆ ಸಚಿವರಾದ ಸನ್ಮಾನ್ಯ ಶ್ರೀ ಅರಬೈಲ್ ಶಿವರಾಮ್ ಹೆಬ್ಬಾರ್ ರವರು ಮುಖ್ಯ ಅತಿಥಿಯಾಗಿ ಪಾಲ್ಗೊಂಡು ರಾಜ್ಯದಲ್ಲಿ ಉತ್ತಮ ಸುರಕ್ಷತಾ ಕ್ರಮಗಳನ್ನು ಅಳವಡಿಸಿಕೊಂಡು ಅಪಘಾತ ನಿಯಂತ್ರಣದ ಉದ್ದೇಶದಲ್ಲಿ ತೊಡಗಿಸಿಕೊಂಡಿರುವ ಹಾಗೂ ಸುರಕ್ಷತಾ ಕ್ಷೇತ್ರದಲ್ಲಿ ಉತ್ತಮ ಸಾಧನೆ ತೋರಿದ ಕಾರ್ಖಾನೆಗಳಿಗೆ ಮತ್ತು ಬಾಯ್ಲರ್‌ಗಳ ನಿರ್ವಹಣೆಯಲ್ಲಿ ಉತ್ತಮ ಸಾಧನೆ ಮಾಡಿರುವ ಕಾರ್ಖಾನೆಗಳಿಗೆ ಸುರಕ್ಷತಾ ಪ್ರಶಸ್ತಿ ಪ್ರಧಾನ ಮಾಡಿದರು. ಇದಲ್ಲದೇ ಸುರಕ್ಷತಾ ಕ್ವಿಜ್‌ನ ವಿಜೇತರಿಗೆ ಮತ್ತು ಸುರಕ್ಷತೆಯ ಕ್ಷೇತ್ರದಲ್ಲಿ ಉತ್ತಮ ಸಾಧನೆ ತೋರಿದ

ಕಾರ್ಮಿಕರಿಗೆ ಪ್ರಶಸ್ತಿ ಪ್ರಧಾನ ಮಾಡಲಾಯಿತು. ಈ ಕಾರ್ಯಕ್ರಮದ ಬಗ್ಗೆ ಹಾಗೂ ಅದರ ಉದ್ದೇಶದ ಬಗ್ಗೆ ಅರಿವು ಮೂಡಿಸಲು ಮಾಹಿತಿಯನ್ನೊಳಗೊಂಡ ಹೋರ್ಡಿಂಗ್ಸ್‌ಗಳನ್ನು ಪ್ರಮುಖ ನಗರದ ವಿವಿಧ ಸ್ಥಳಗಳಲ್ಲಿ ಪ್ರಚುರ ಪಡಿಸಲಾಯಿತು. ಈ ಕಾರ್ಯಕ್ರಮದಲ್ಲಿ ಸುಮಾರು 1200 ಕಾರ್ಮಿಕರು, ಕೈಗಾರಿಕಾ ಪ್ರತಿನಿಧಿಗಳು ಹಾಗೂ ಸರ್ಕಾರದ ಅಧಿಕಾರಿಗಳು ಪಾಲ್ಗೊಂಡಿದ್ದರು.

**2020ನೇ ಸಾಲಿನ ಯೋಜನೆಗಳು, ನಡೆಸಿದ ತರಬೇತಿ ಮತ್ತು ಗುರಿಗಳ ವಿವರಗಳು:**

| ಕ್ರ. ಸಂ. | ಕಾರ್ಯಕ್ರಮಗಳು | ವಾರ್ಷಿಕ ಗುರಿ | ಸಾಧನೆ | ಉದ್ದೇಶಿತ ಫಲಾನುಭವಿಗಳ ಸಂಖ್ಯೆ | ತರಬೇತಿಯ ಫಲಾನುಭವಿಗಳ ಸಂಖ್ಯೆ |
|---|---|---|---|---|---|
| 1 | ಒಂದು ದಿನದ ಸುರಕ್ಷತಾ ತರಬೇತಿ ಕಾರ್ಯಕ್ರಮಗಳು | 150 | 10 | 4500 | 340 |
| 2 | ವಿಶೇಷ ತರಬೇತಿ ಕಾರ್ಯಕ್ರಮಗಳು | 8 | 1 | 240 | 200 |
| 3 | ವಿಚಾರ ಸಂಕಿರಣ/ಕಾರ್ಯಗಾರ | 2 | 1 | 200 | 1200 |
| 4 | ಬಾಯ್ಲರ್‌ಗಳ ಆಪರೇಟರ್‌ಗಳ ತರಬೇತಿ | 9 | 0 | 270 | 0 |
| | **ಒಟ್ಟು** | **169** | **12** | **5210** | **1740** |

2019-20ನೇ ಸಾಲಿನಲ್ಲಿ ಇಲಾಖೆಯ ಕರ್ನಾಟಕ ರಾಜ್ಯ ಸುರಕ್ಷತಾ ಸಂಸ್ಥೆಯ ವತಿಯಿಂದ ಕಾರ್ಖಾನೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರಿಗೆ ಒಟ್ಟು 150 ಒಂದು ದಿನದ ಸುರಕ್ಷತಾ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. 2020ನೇ ಸಾಲಿನಲ್ಲಿ 160ಕ್ಕೂ ಹೆಚ್ಚು ತರಬೇತಿ ಕಾರ್ಯಕ್ರಮಗಳನ್ನು ನಡೆಸಲು ಯೋಜಿಸಲಾಗಿತ್ತು. ಆದರೆ ಕೋವಿಡ್-19 ಸಂಕಷ್ಟದ ಹಿನ್ನೆಲೆಯಲ್ಲಿ ತರಬೇತಿ ಕಾರ್ಯಕ್ರಮಗಳನ್ನು ನಡೆಸಲು ಸಾಧ್ಯವಾಗಿರುವುದಿಲ್ಲ.

ದಿನಾಂಕ 22-01-2020ರಂದು ಸೆಂಟರ್ ಫಾರ್ ಪಬ್ಲಿಕ್ ಪಾಲಿಸಿ, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಬೆಂಗಳೂರು ಆವರಣದಲ್ಲಿ ಕಟ್ಟಡ ಕಾರ್ಮಿಕರ ಸುರಕ್ಷತೆ ಆರೋಗ್ಯ ಮತ್ತು ಇತರೆ ಸೌಲಭ್ಯಗಳನ್ನು ಖಾತರಿಪಡಿಸುವ ಸಂಬಂಧ ನಿರ್ಮಾಣ ಕಾಮಗಾರಿಗಳಲ್ಲಿ ಸುರಕ್ಷತಾ ಮಾನದಂಡಗಳನ್ನು ಮತ್ತು ಕೆಲಸದ ಗುಣಮಟ್ಟವನ್ನು ಗಮನಾರ್ಹವಾಗಿ ಸುಧಾರಣೆ ಹಾಗೂ ಅನುಷ್ಠಾನ ವ್ಯವಸ್ಥೆಯನ್ನು ಉತ್ತಮಪಡಿಸುವ ಹಾದಿಯಲ್ಲಿ ಸರ್ಕಾರವು ಅನುಸರಿಸಬೇಕಾದ ಕಾರ್ಯವಿಧಾನಗಳಲ್ಲಿ **"ಕಟ್ಟಡ ನಿರ್ಮಾಣ ಕಾರ್ಮಿಕರ ಸುರಕ್ಷತೆ"** ಕುರಿತಂತೆ ವಿಶೇಷ ಕಾರ್ಯಗಾರವನ್ನು ಮಾನ್ಯ ಕಾರ್ಮಿಕ ಸಚಿವರಾದ ಶ್ರೀ ಎಸ್ ಸುರೇಶ್ ಕುಮಾರ್ ರವರ ಅಧ್ಯಕ್ಷತೆಯಲ್ಲಿ ಹಮ್ಮಿಕೊಂಡು ಯಶಸ್ವಿಗೊಳಿಸಲಾಯಿತು. ವಿವಿಧ ಕಾರ್ಖಾನೆಗಳ ಆಡಳಿತ ವರ್ಗದವರು ಸರ್ಕಾರದ ಉನ್ನತ ಅಧಿಕಾರಿಗಳು ಪಾಲ್ಗೊಂಡಿರುತ್ತಾರೆ.

### 1.4 ಪ್ರೆಷರ್ ವೆಸೆಲ್ ಮತ್ತು ಪ್ಲಾಂಟ್ ಸೇಫ್ಟಿ ಮಾನಿಟರಿಂಗ್ ಸೆಲ್:

ಕಾರ್ಖಾನೆಗಳಲ್ಲಿ ಅಳವಡಿಸಿ ಉಪಯೋಗಿಸಲಾಗುತ್ತಿರುವ ಅಪಾಯಕಾರಿ ಯಂತ್ರಗಳನ್ನು ಸುರಕ್ಷತೆಯ ದೃಷ್ಟಿಯಿಂದ ಕಾಲಕಾಲಕ್ಕೆ ಪರೀಕ್ಷಿಸಿ ಪ್ರಮಾಣ ಪತ್ರವನ್ನು ನೀಡಲು ಇಲಾಖೆಯಿಂದ ಧೃಡೀಕೃತ ವ್ಯಕ್ತಿಗಳನ್ನು ಗುರುತಿಸಲಾಗುತ್ತಿದೆ. 2020ನೇ ಸಾಲಿನ ಅಂತ್ಯದವರೆಗೆ 24 ದೃಢೀಕೃತ ವ್ಯಕ್ತಿಗಳು, 28 ಸಂಸ್ಥೆಗಳು ಹಾಗೂ 08 ಕಾರ್ಖಾನೆಗಳನ್ನು ಧೃಡೀಕೃತ ವ್ಯಕ್ತಿ/ಸಂಸ್ಥೆಗಳನ್ನಾಗಿ ಗುರುತಿಸಲಾಗಿದೆ. ಇದರಿಂದ ರೂ. 7,42,000/- ಶುಲ್ಕವು ಸರ್ಕಾರಕ್ಕೆ ಸಂದಾಯವಾಗಿರುತ್ತದೆ. ಸದರಿಯವರಿಗೆ ಈ ಕೆಳಕಂಡ ಯಂತ್ರೋಪಕರಣಗಳನ್ನು ಪರೀಕ್ಷಿಸಿ ಪ್ರಮಾಣ ಪತ್ರ ನೀಡಲು ಮಾನ್ಯತೆ ನೀಡಲಾಗಿರುತ್ತದೆ.

- ಲಿಫ್ಟ್ಸ್, ಹಾಯಿಸ್ಟ್ಸ್, ಲಿಫ್ಟಿಂಗ್ ಮೆಷಿನ್ಸ್ ಮತ್ತು ಲಿಫ್ಟಿಂಗ್ ಟ್ಯಾಕಲ್ಸ್, ಚೈನ್ಸ್, ರೋಪ್ಸ್.
- ಪ್ರೆಷರ್ ವೆಸೆಲ್ಸ್ ಮತ್ತು ಪ್ರೆಷರ್ ಪ್ಲಾಂಟ್ಸ್.
- ಸೆಂಟ್ರಿಫ್ಯೂಗಲ್ ಯಂತ್ರಗಳು.
- ಪವರ್ ಪ್ರೆಸ್.

- ಡಸ್ಟ್ ಎಕ್ಸಟ್ರಾಕ್ಷನ್ ಸಿಸ್ಟಂಸ್.
- ಡ್ರೈಯರ್ಸ್ ಹಾಗೂ ಓವನ್ಸ್.
- ಶಾಟ್ ಬ್ಲಾಸ್ಟಿಂಗ್ ಇಕ್ವಿಪ್‌ಮೆಂಟ್.
- ಸಾಲ್ವೆಂಟ್ ಎಕ್ಸ್‌ಟ್ರ್ಯಾಕ್ಷನ್ ಪ್ಲಾಂಟ್.
- ವಾಟರ್ ಸೀಲ್ಡ್ ಗ್ಯಾಸ್ ಹೋಲ್ಡರ್ಸ್.

**1.5 ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ 1996:–**

ದಿನಾಂಕ : 11–02–2011 ರಿಂದ ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯ ಅಧಿಕಾರಿಗಳನ್ನು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಮತ್ತು ಸೇವಾ ಷರತ್ತುಗಳು ನಿಯಂತ್ರಣ) ಕಾಯ್ದೆ, 1996 ಕಲಂ 38, 39, 40 ಹಾಗೂ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗ ಮತ್ತು ಸೇವಾ ಷರತ್ತುಗಳು ನಿಯಂತ್ರಣ) ನಿಯಮಾವಳಿಗಳು, 2006ರ ನಿಯಮ 50 ರಿಂದ 251 ರಲ್ಲಿನ ಸುರಕ್ಷತಾ ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ಪ್ರಾವಧಾನಗಳನ್ನು 25 ಕೋಟಿ ಹಾಗೂ ಅದಕ್ಕೂ ಹೆಚ್ಚಿನ ವೆಚ್ಚದ ಕಟ್ಟಡ ನಿರ್ಮಾಣ ಕಾಮಗಾರಿಗಳಲ್ಲಿ ಅನುಷ್ಠಾನಕ್ಕೆ ತರುವ ಕುರಿತಂತೆ ತಪಾಸಣೆ ನಡೆಸಲು "ನಿರೀಕ್ಷಕ" ರನ್ನಾಗಿ ಅಧಿಸೂಚಿಸಲಾಗಿರುತ್ತದೆ.

**ಸಾಧನೆಗಳು:–**

ಈ ಕಾಯ್ದೆಯಡಿಯಲ್ಲಿ ಇಲಾಖೆಯ ಅಧಿಕಾರಿಗಳು 2020ನೇ ಸಾಲಿನಲ್ಲಿ ಒಟ್ಟು 107 ಪರಿವೀಕ್ಷಣೆಗಳನ್ನು ಮಾಡಿರುತ್ತಾರೆ ಹಾಗೂ ಈ ಕಾಯ್ದೆಯಡಿಯಲ್ಲಿ 09 ಮೊಕದ್ದಮೆಗಳನ್ನು ಸಂಬಂಧಪಟ್ಟ ನ್ಯಾಯಾಲಯದಲ್ಲಿ ದಾಖಲಿಸಲಾಗಿದೆ.

**1.6 ಸೆಂಟ್ರಲ್ ಸೇಫ್ಟಿ ಮಾನಿಟರಿಂಗ್ ಸೆಲ್ (ಸ್ಥಾಪನೆ 1989)**

**ಉದ್ದೇಶ:–**

ಪರಿಸರ (ಸಂರಕ್ಷಣಾ) ಕಾಯ್ದೆ 1986 ರಡಿ ರೂಪಿಸಿರುವ ಕೆಮಿಕಲ್ ಅಕ್ಸಿಡೆಂಟ್ಸ್ (ತುರ್ತು ರಚನಾಕ್ರಮ, ಪೂರ್ವಸಿದ್ಧತೆ ಹಾಗೂ ಪ್ರತಿಕ್ರಿಯೆ) ನಿಯಮಗಳು 1996 ಮತ್ತು ಕಾರ್ಖಾನೆಗಳ ಕಾಯ್ದೆ 1948ರ ಚಾಪ್ಟರ್ IVA ರಡಿ ಅಪಾಯಕಾರಿ ಕಾರ್ಯಾಚರಣೆ ಹೊಂದಿರುವ ಕೈಗಾರಿಕೆಗಳನ್ನು ಗುರುತಿಸುವುದು, ಅಪಾಯಕಾರಿ ಕಾರ್ಯಚಟುವಟಿಕೆಗಳ ಮೇಲೆ ನಿಗಾವಹಿಸುವುದು ಮತ್ತು ಅವುಗಳಿಂದ ಅನುಸರಣೆಯನ್ನು ಪಡೆಯುವುದು.

**ಚಟುವಟಿಕೆ:–**

ಡಿಸೆಂಬರ್ 03, 1984 ರಲ್ಲಿ ನಾಗರೀಕ ಜಗತ್ತು ಕಂಡರಿಯದ ಒಂದು ಘೋರವಾದ ಕೈಗಾರಿಕಾ ದುರಂತವು ಭೋಪಾಲ್‌ನಲ್ಲಿ ಘಟಿಸಿತ್ತು. ರಾಸಾಯನಿಕ ಕೈಗಾರಿಕೆಗಳು ರಾಸಾಯನಿಕ ಕಾರ್ಯಾಚರಣೆ ಇರುವ ಕಾರ್ಖಾನೆಗಳನ್ನು ಹೊಂದಿರುವ ರಾಜ್ಯಗಳು ಕೈಗಾರಿಕೆಗಳಲ್ಲಿ ಘಟಿಸುವ ಇಂತಹ ದುರಂತಗಳನ್ನು ನಿಭಾಯಿಸುವಲ್ಲಿ ಇರುವ ಕಾರ್ಯಕ್ಷಮತೆ ಬಗ್ಗೆ ಪುನರಾವಲೋಕನೆಯನ್ನು ಕೈಗೊಂಡವು. ಅಸ್ತಿತ್ವದಲ್ಲಿರುವ ಹಾಗೂ ಉದ್ದೇಶಿತ ಕೈಗಾರಿಕೆಗಳಲ್ಲಿ ಸುರಕ್ಷತಾ ಕ್ರಮಗಳ ಬಗ್ಗೆ ಸಮೀಕ್ಷಿಸಲು ಒಂದು ಸಮರ್ಪಣ ಭಾವದ ಸಂಸ್ಥೆಯ ಅಗತ್ಯತೆ ಕಂಡು ಬಂದ ಕಾರಣ ಇಂತಹ ಕೋಶವನ್ನು ಸ್ಥಾಪಿಸಲಾಗಿದೆ. ಪ್ರಸ್ತಾಪಿತ ಕೋಶವು ಅಪಾಯಕಾರಿ ಕಾರ್ಯಚಟುವಟಿಕೆಗಳಿರುವ ಕೈಗಾರಿಕೆಗಳನ್ನು ಸೂಕ್ಷ್ಮವಾಗಿ ಗಮನಿಸಿ ಸೂಕ್ತ ಮಾರ್ಗಸೂಚಿಗಳನ್ನು ನೀಡಿ ಕೈಗಾರಿಕಾ ದುರಂತಗಳನ್ನು ನಿಯಂತ್ರಿಸುವುದು ಮತ್ತು ಉತ್ತಮ ಎಮರ್ಜೆನ್ಸಿ ಪ್ಲಾನಿಂಗ್ ಮತ್ತು ಪ್ರಕ್ರಿಯೆಯನ್ನೊಳಗೊಂಡ ಪರಿಣಾಮಕಾರಿ ಯೋಜನೆಯನ್ನು ತಯಾರಿಸಲು ಮಾರ್ಗದರ್ಶನ ಹಾಗೂ ಮಂಜೂರಾತಿ ಕೆಲಸ ಮಾಡುತ್ತಿದೆ.

2020ನೇ ಸಾಲಿಗೆ ಎಲ್ಲಾ ಅಪಾಯಕಾರಿ ಕಾರ್ಖಾನೆಗಳಿಗೆ ಅನುಕೂಲವಾಗಲು ಮಾದರಿ ಆನ್‌ಸೈಟ್ ಎಮರ್ಜೆನ್ಸಿ ಪ್ಲಾನ್ ತಯಾರಿಸಿ ತಿಳಿಸಲಾಗಿದೆ.

ಆಂಧ್ರ ಪ್ರದೇಶದಲ್ಲಿ ಸಂಭವಿಸಿದ Styrene ಗ್ಯಾಸ್ ದುರಂತದ ತನಿಖಾ ವರದಿ ಆಧರಿಸಿ ಸದರಿ ನಮೂನೆಯನ್ನು ತಯಾರಿಸಲಾಗಿದೆ. ಡಿಸೆಂಬರ್ 4, 2020ರಂದು ರಾಸಾಯನಿಕ ದುರಂತ ನಿವಾರಣಾ ದಿನದ ಅಂಗವಾಗಿ ಅಪಾಯಕಾರಿ ರಾಸಾಯನಿಕ ಕಾರ್ಖಾನೆಗಳಿಗೆ ವೆಬಿನಾರ್ ಮೂಲಕ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಎಮರ್ಜೆನ್ಸಿ ಪ್ಲಾನ್ ಪ್ರತಿಕ್ರಿಯೆಯು ಈ ಇಲಾಖೆಗೆ ಮಾತ್ರ ಸೀಮಿತವಾಗದೆ ಜಿಲ್ಲಾ ಆಡಳಿತವನ್ನು ಒಳಗೊಂಡಂತೆ ರಾಜ್ಯದ ವಿವಿಧ ಇಲಾಖೆಗಳು, ಸರ್ಕಾರೇತರ ಸಂಘ ಸಂಸ್ಥೆಗಳು ಮತ್ತು ಪರಿಣಿತರನ್ನು ಒಳಗೊಂಡಿರುತ್ತದೆ. ಇಂತಹ ಉದ್ದೇಶವನ್ನು ಹೊಂದಿ ಸೆಂಟ್ರಲ್ ಸೇಫ್ಟಿ ಮಾನಿಟರಿಂಗ್ ಸೆಲ್ ಕಾರ್ಯನಿರ್ವಹಿಸುತ್ತಿದೆ.

## 1.7 ಔದ್ಯೋಗಿಕ ಆರೋಗ್ಯ ಮತ್ತು ಸ್ವಾಸ್ಥ್ಯ:

**ಉದ್ದೇಶ ಮತ್ತುಚಟುವಟಿಕೆ:-**

ಕಾರ್ಖಾನೆಗಳ ಜಂಟಿ ನಿರ್ದೇಶಕರು (ವೈ) ಹಾಗೂ ಔದ್ಯೋಗಿಕ ಆರೋಗ್ಯ ತಜ್ಞರು, ಇವರುಗಳು ನಿಗದಿತವಾಗಿ ಅಪಾಯಕಾರಿ ಕಾರ್ಖಾನೆಗಳಿಗೆ ಭೇಟಿ ನೀಡಿ ಕೆಲಸ ನಿರ್ವಹಿಸುವ ಕಾರ್ಮಿಕರ ಆರೋಗ್ಯದ ಕುರಿತು ತೆಗೆದುಕೊಳ್ಳುತ್ತಿರುವ ವೈದ್ಯಕೀಯ ತಪಾಸಣಾ ಕ್ರಮಗಳು ಹಾಗೂ ಕರ್ನಾಟಕ ಕಾರ್ಖಾನೆಗಳ ನಿಯಮಗಳ ಅನುಷ್ಠಾನಗಳ ಬಗ್ಗೆ ಕ್ರಮವಹಿಸುತ್ತಿದ್ದಾರೆ. ವೃತ್ತಿಪರ ಖಾಯಿಲೆಗಳನ್ನು ಪತ್ತೆ ಹಚ್ಚುವುದು ಹಾಗೂ ಅದನ್ನು ಪ್ರಥಮ ಹಂತದಲ್ಲಿಯೇ ಕಂಡು ಹಿಡಿಯುವುದು ಅವರ ಪ್ರಥಮ ಆದ್ಯತೆಯಾಗಿದ್ದು, ಇದರ ಜೊತೆಯಲ್ಲಿ ಖಾಯಿಲೆಗಳನ್ನು ತಡೆಗಟ್ಟುವಲ್ಲಿ ತೆಗೆದುಕೊಳ್ಳಬೇಕಾದ ವೈಯಕ್ತಿಕ ರಕ್ಷಣಾ ಉಪಕರಣಗಳ ಕುರಿತು ಮಾರ್ಗದರ್ಶನ ನೀಡುತ್ತಾರೆ. ಕರ್ನಾಟಕ ರಾಜ್ಯ ಸುರಕ್ಷತಾ ಸಂಸ್ಥೆಯ ಮುಖಾಂತರ ಕಾರ್ಯಕ್ರಮ ಕೈಗೊಳ್ಳುತ್ತಿರುತ್ತಾರೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ಆದೇಶದಂತೆ ರಾಜ್ಯದಲ್ಲಿರುವ ಸಿದ್ದ ಉಡುಪುಗಳು ಮಹಿಳಾ ಕಾರ್ಮಿಕರಿಗೆ ರಕ್ತ ಹೀನತೆಯ ಕುರಿತು ವೈದ್ಯಕೀಯ ಸಮೀಕ್ಷೆಯನ್ನು ಕೈಗೊಳ್ಳುವ ಪ್ರಕ್ರಿಯೆಯು ಜಾರಿಯಲ್ಲಿದೆ ಅಲ್ಲದೇ ರಾಷ್ಟ್ರೀಯ ಮಾನವ ಹಕ್ಕು ಆಯೋಗದ ಅಣತೆಯಂತೆ ಸಿಲಿಕ ದೂಳಿನಿಂದ ಆಗುವ ಸಿಲಿಕೋಸಿಸ್ ಖಾಯಿಲೆ ಬಗ್ಗೆ ವೈದ್ಯಕೀಯ ಸಮೀಕ್ಷೆಯಲ್ಲಿ ಪತ್ತೆಯಾದಂತಹ ಬಾಧಿತ ಕಾರ್ಮಿಕರಿಗೆ ಇಎಸ್ಐಎಸ್ ಮೂಲಕ ವೈದ್ಯಕೀಯ ನೆರವು ಹಾಗೂ ಪರಿಹಾರ ಕೊಡಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿರುತ್ತಾರೆ. KSAPS ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆಷನಲ್ ಸೊಸೈಟಿಯೊಂದಿಗೆ ಜೊತೆಗೂಡಿ ಎಚ್ಐವಿ ಕುರಿತಾದಂತಹ ಅರಿವು ಮೂಡಿಸುವ ತರಬೇತಿ ಕಾರ್ಯಕ್ರಮಗಳನ್ನು KSAPS ಅಂಗಣ ಮತ್ತು ಕಾರ್ಖಾನೆಗಳಲ್ಲಿ ಮಾಡಲಾಗಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜೊತೆಗೂಡಿ ಎಸಿಎಫ್-ಟಿಬಿ, ಟಿಬಿ ಕಾಯಿಲೆ ಪತ್ತೆ ಹಚ್ಚುವ ಕಾರ್ಯಕ್ರಮದಲ್ಲಿ ಸಕ್ರೀಯವಾಗಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿರುತ್ತಾರೆ.

ತ್ಯಾಜ್ಯ ವಿಲೇವಾರಿ ಕಾರ್ಖಾನೆಗಳಲ್ಲಿ ಕಾರ್ಯನಿರ್ವಹಿಸುವ ಕಾರ್ಮಿಕರ ಸುರಕ್ಷತೆ ಮತ್ತು ಆರೋಗ್ಯ ಕುರಿತಂತೆ ರಾಷ್ಟ್ರೀಯ ಹಸಿರು ಪ್ರಾಧಿಕಾರದ ಸೂಚನೆಯಂತೆ ಕಾರ್ಖಾನೆಗಳಿಗೆ ಭೇಟಿ ನೀಡಿ ತಪಾಸಣೆ ನಡೆಸಿ ಆಡಳಿತ ವರ್ಗಕ್ಕೆ ಕಾರ್ಮಿಕರ ಆರೋಗ್ಯ ಮತ್ತು ಸುರಕ್ಷತೆ ಕುರಿತಂತೆ ಕೈಗೊಳ್ಳಬೇಕಾದ ಕ್ರಮಗಳನ್ನು ವಿವರಿಸಿ ಜಾರಿಗೆ ತರುವಂತೆ ಮತ್ತು ಕಾರ್ಮಿಕರ ಆರೋಗ್ಯ ತಪಾಸಣೆ ನಡೆಸುವಂತೆ ಸೂಚಿಸಲಾಯಿತು.

ಕೋವಿಡ್-19 ಸಂಬಂಧಿಸಿದಂತೆ ವಲಸೆ ಕಾರ್ಮಿಕರಿಗೆ ಮತ್ತು ಕಟ್ಟಡ ಕಾರ್ಮಿಕರರಿಗೆ ಇಲಾಖೆ ಅಧಿಕಾರಿಗಳೊಂದಿಗೆ ಜೊತೆಗೂಡಿ ಕಾರ್ಮಿಕರಿಗೆ ತಯಾರಿಸಿದ ಆಹಾರವನ್ನು ವಿತರಿಸುವ ಕಾರ್ಯಕ್ರಮದಲ್ಲಿ ಮೇಲ್ವಿಚಾರಣೆ ನಡೆಸಲಾಯಿತು.

ಕೋವಿಡ್-19 ಕಾಯಿಲೆಯ ನಿಯಂತ್ರಣ ಕಾರ್ಯಕ್ರಮದಲ್ಲಿ ಬಿಬಿಎಂಪಿ ಮತ್ತು ಆರೋಗ್ಯ ಇಲಾಖೆಯ ಜೊತೆಗೂಡಿ ಕಾರ್ಖಾನೆಗಳಿಗೆ ಭೇಟಿ ನೀಡಿ ಪರಿಶೀಲಿಸಿ ಇಲಾಖೆಯು ಹೊರಡಿಸಿರುವ ಎಸ್ಓಪಿ ಅನ್ನು ಕಾರ್ಖಾನೆಗಳು ಪಾಲಿಸುತ್ತಿರುವ ಬಗ್ಗೆ ಪರಿಶೀಲಿಸಿ ಆಡಳಿತ ವರ್ಗದವರಿಗೆ ಸೂಕ್ತ ಮಾರ್ಗದರ್ಶನ ನೀಡಲಾಗಿರುತ್ತದೆ. ಬಿಬಿಎಂಪಿ ರವರು ಕಾರ್ಮಿಕರುಗಳಿಗೆ ನಡೆಸುತ್ತಿದ್ದ ಕೋವಿಡ್-19 ಕಾಯಿಲೆ ನಿಯಂತ್ರಣಕ್ಕೆ ಸಂಬಂಧಿಸಿದಂತೆ ತ್ರೋಟ್ ಸ್ವಾಬ್‌ಕಲೆಕ್ಷನ್ ಮಾಡುವಲ್ಲಿ ಕಾರ್ಖಾನೆಯ ಆವರಣದಲ್ಲಿ ನಡೆಸಲು ಅನುಕೂಲ ಮಾಡಿಕೊಡಲಾಗಿರುತ್ತದೆ ಮತ್ತು ಎಲ್ಲಾ ಕಾರ್ಮಿಕರುಗಳಿಗೆ ಕೋವಿಡ್-19 ಕಾಯಿಲೆಯ ಬಗ್ಗೆ ಅರಿವು ಮೂಡಿಸಲು ಕಾರ್ಯಕ್ರಮಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಲಾಗಿದೆ.

**1.8 ಇತರೆ ಪೂರಕ ಕಾರ್ಯ ಸಾಧನೆಗಳು:–**

**ಅಪಘಾತಗಳ ತಡೆಗಟ್ಟುವಿಕೆ:–**

ಇಲಾಖೆಯಲ್ಲಿ ಲಭ್ಯವಿರುವ ಅಂಕಿ ಅಂಶಗಳು ಕೈಗಾರಿಕಾ ಚಟುವಟಿಕೆಯಲ್ಲಿ ಹೆಚ್ಚಳ ಮತ್ತು ಪ್ರಗತಿಪರ ದಿಕ್ಕಿನಲ್ಲಿ ಸಾಧನೆಯನ್ನು ತಿಳಿಸುತ್ತದೆ.

ರಾಜ್ಯದಲ್ಲಿ ನೊಂದಾಯಿತ ಕಾರ್ಖಾನೆಗಳಲ್ಲಿ ಸಂಭವಿಸುವ ಅಪಘಾತಗಳು ಮತ್ತು ರಾಸಾಯನಿಕ ದುರಂತಗಳ ಆಧಾರದ ಮೇಲೆ ಇಲಾಖೆಯ ಕಾರ್ಯ ಕ್ಷಮತೆಯನ್ನು ವಿಶ್ಲೇಶಿಸಬಹುದಾಗಿರುತ್ತದೆ. ಈ ವರ್ಷದಲ್ಲಿ ನೊಂದಾಯಿತ ಕಾರ್ಖಾನೆಗಳ ಸಂಖ್ಯೆಯು 16,917 ಇದ್ದು, ಕಾರ್ಮಿಕರ ಸಂಖ್ಯೆಯು 16,55,617 ಇದ್ದು, ಈ ಕಾರ್ಮಿಕರು ಕಾರ್ಖಾನೆಗಳಲ್ಲಿ ಕೆಲಸ ಮಾಡುವಾಗ ಈ ವರ್ಷದಲ್ಲಿ 50 ಮಾರಣಾಂತಿಕ ಅಪಘಾತಗಳು, 12 ಗುರುತರ ಅಪಘಾತಗಳು ಸಂಭವಿಸಿರುತ್ತದೆ. ಕಾರ್ಖಾನೆಗಳಲ್ಲಿ ಮಾನವ ದುಡಿತದ ದಿನಗಳಲ್ಲಿ ಹೆಚ್ಚಳ ಉಂಟಾಗಿದ್ದು ಅಪಘಾತಗಳು ಇಳಿಮುಖಗೊಳ್ಳುತ್ತಿರುತ್ತವೆ ಹಾಗೂ ರಾಜ್ಯದಲ್ಲಿ ಅಪಘಾತಕಾರಿ ಕಾರ್ಖಾನೆಗಳಲ್ಲಿ ಯಾವುದೇ ರಾಸಾಯನಿಕ ದುರಂತಗಳು ಸಂಭವಿಸಿರುವುದಿಲ್ಲ.

**ಮೊಕದ್ದಮೆಗಳು:–**

ಇಲಾಖೆಯು ಜಾರಿ ಮಾಡುವ ಕಾರ್ಖಾನೆಗಳಲ್ಲಿ ಕಾಯ್ದೆ/ನಿಯಮಗಳನ್ನು ಉಲ್ಲಂಘನೆ ಮಾಡುವ ಆಡಳಿತ ವರ್ಗದವರನ್ನು ಗುರುತಿಸಿ ಅವರ ವಿರುದ್ಧ 142 ಕ್ರಿಮಿನಲ್ ಮೊಕದ್ದಮೆಗಳನ್ನು ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ ಹೂಡಲಾಗಿರುತ್ತದೆ. ಕಟ್ಟಡ ಹಾಗೂ ಇತರೆ ನಿರ್ಮಾಣ ಕಾಯ್ದೆಯಡಿಯಲ್ಲಿ 09 ಮೊಕದ್ದಮೆಗಳನ್ನು ಹಾಗೂ ವೇತನ ಸಂದಾಯ ಕಾಯ್ದೆಯಡಿ 09 ಅರ್ಜಿಗಳನ್ನು ದಾಖಲು ಮಾಡಲಾಗಿರುತ್ತವೆ.

**2. ಬಾಯ್ಲರ್ ವಿಭಾಗ:–**

ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯ ನಿರ್ದೇಶನಾಲಯದ ಬಾಯ್ಲರ್ ವಿಭಾಗವು, ಕಾರ್ಖಾನೆಗಳಲ್ಲಿ ಸುರಕ್ಷತೆಯನ್ನು ಉತ್ತೇಜಿಸುವ, ಬಾಯ್ಲರ್ ಅಪಘಾತಗಳನ್ನು ತಡೆಯುವ ಮತ್ತು ಸಾರ್ವಜನಿಕರ ಮತ್ತು ಕಾರ್ಮಿಕರ ಜೀವ ಮತ್ತು ಆಸ್ತಿಪಾಸ್ತಿಗಳನ್ನು ರಕ್ಷಿಸುವ ಜವಾಬ್ದಾರಿಯನ್ನು ನಿರ್ವಹಿಸಲು ಸಂಬಂಧಿಸಿದ ಕಾನೂನುಗಳನ್ನು ಜಾರಿಗೊಳಿಸುತ್ತಿದೆ. ಬಾಯ್ಲರ್ ಉಪಯೋಗಿಸುವಿಕೆಯಲ್ಲಿ ಸುರಕ್ಷತೆಯನ್ನು ಖಾತರಿಪಡಿಸಿಕೊಳ್ಳಲು ಅಗತ್ಯವಾದ ಮೂರು ಮುಖ್ಯ ವಿಚಾರಗಳಾದ ಬಾಯ್ಲರ್‌ಗಳ ತಯಾರಿಕ ಸುರಕ್ಷತೆ, ನಿರ್ವಹಣಾ ಸುರಕ್ಷತೆ ಮತ್ತು ಕಾರ್ಯ ಸುರಕ್ಷತೆ ವಿಷಯಗಳು ಇಂಡಿಯನ್ ಬಾಯ್ಲರ್ ರೆಗ್ಯುಲೇಷನ್ 1950 ಮತ್ತು ಬಾಯ್ಲರ್ಸ್ ಆಕ್ಟ್, 1923ರ ಅಡಿಯಲ್ಲಿ ರಾಜ್ಯ ಸರ್ಕಾರದಿಂದ ರೂಪಿಸಲ್ಪಟ್ಟ ನಿಯಮಗಳ ಅಡಿಯಲ್ಲಿ ಪ್ರಸ್ತಾಪಿಸಲಾಗಿದೆ. ಶಾಸನಬದ್ಧ ನಿಯಮಗಳು, ಬಾಯ್ಲರ್ ತಯಾರಿಕಾ ವಲಯದಲ್ಲಿ ಉಂಟಾಗುತ್ತಿರುವ ತಾಂತ್ರಿಕ ಪ್ರಗತಿಯ ಆಧಾರದ ಮೇಲೆ ಆಗಿಂದ್ದಾಗ್ಗೆ, ಸೆಂಟ್ರಲ್ ಬಾಯ್ಲರ್ಸ್ ಬೋರ್ಡ್‌ನಿಂದ ಪರಿಷ್ಕರಣೆಗೊಳ್ಳುತ್ತಿವೆ.

ರಾಜ್ಯದಲ್ಲಿ ದಿ: 31–12–2020 ಕ್ಕೆ ಸುಮಾರು 5294 ಬಾಯ್ಲರುಗಳು, 114 ಎಕಾನಾಮೈಸರುಗಳು ಮತ್ತು 4410 ಹಬೆಕೊಳವೆ ನೊಂದಾವಣೆಗೊಂಡಿರುತ್ತವೆ. ರಾಜ್ಯ ಸರ್ಕಾರದ ಹೊಸ ಕೈಗಾರಿಕಾ ನೀತಿಗೆ ಹಾಗೂ ರಾಷ್ಟ್ರದ ಜಾಗತೀಕರಣ, ಉದಾರೀಕರಣ ನೀತಿಗೆ ಅನುಗುಣವಾಗಿ ಬಾಯ್ಲರ್ ಸುರಕ್ಷತೆಯ ಆಧ್ಯತೆಯನ್ನು ಸಡಿಲಿಸದೆ, ತಯಾರಿಕಾ ಚಟುವಟಿಕೆಗಳಿಗೆ ಯಾವುದೇ ಅಡಚಣೆಯನ್ನು ಉಂಟುಮಾಡದೆ, ಕಾಲಮಿತಿಯಡಿಯಲ್ಲಿ ನಿಯಮಗಳನ್ನು ಅನುಷ್ಠಾನಗೊಳಿಸುತ್ತಿದೆ.

**ಕಾರ್ಯಚಟುವಟಿಕೆಗಳು ಮತ್ತು ಸಾಧನೆಗಳು:–**

ನಿಯತಕಾಲಿಕ ಪರಿವೀಕ್ಷಣೆಗಳಿಗೆ ಗುರಿಗಳನ್ನು ನಿಗದಿಪಡಿಸಲಾಗಿರುತ್ತದೆ, ಇದರ ಜೊತೆಯಲ್ಲಿ ತರಬೇತಿ ಕಾರ್ಯಕ್ರಮಗಳನ್ನು ನಡೆಸಲು ಸಹ ಗುರಿಗಳನ್ನು ನಿಗದಿಪಡಿಸಲಾಗಿರುತ್ತದೆ. ಇಲಾಖೆಯು ತನ್ನ ಹಲವು ಸೇವೆಗಳಿಗೆ, ಸಾರ್ವಜನಿಕರಿಗೆ ಅನುಕೂಲವಾಗುವಂತೆ ಕಾಲಮಿತಿಯನ್ನು ನಿಗದಿಪಡಿಸಿರುತ್ತದೆ, ಅದರಂತೆ ಪ್ರಕರಣಗಳ ವಿಲೇವಾರಿ ಮಾಡಲಾಗುತ್ತಿದೆ.

## 2.1 ಬಾಯ್ಲರ್ ಮೆಟೀರಿಯಲ್ ಟೆಸ್ಟಿಂಗ್ ಅಂಡ್ ಟ್ರೈನಿಂಗ್ ಸೆಂಟರ್ (ಸ್ಥಾಪನೆ 2017)

**ಉದ್ದೇಶ ಮತ್ತು ಚಟುವಟಿಕೆ:–**

ರಾಜ್ಯದಲ್ಲಿ ಬಾಯ್ಲರುಗಳನ್ನು ಉಪಯೋಗಿಸುವ ಕಾರ್ಖಾನೆಗಳು ಉರವಲನ್ನು ಮಿತವ್ಯಯಿಸಲು ಮತ್ತು ಹಬೆಯನ್ನು ದಕ್ಷವಾಗಿ ಉಪಯೋಗಿಸಲು, ಅಧಿಕ ಒತ್ತಡದ ಬಾಯ್ಲರುಗಳಿಗೆ ಅಗತ್ಯವಿರುವ ನಿರ್ವಹಣಾ ಸಿಬ್ಬಂದಿಯ, ಎರೆಕ್ಷನ್ ಸಿಬ್ಬಂದಿಯ ಮತ್ತು ಪ್ರೆಶರ್ ಪಾರ್ಟ್ ತಯಾರಿಕಾ ಸಿಬ್ಬಂದಿಯು ತಾಂತ್ರಿಕ ಪರಿಣಿತಿಯು ಅತ್ಯುತ್ತಮ ಮಟ್ಟದಲ್ಲಿ ಕಾರ್ಯರಿಸಲು, ಈ ಸಿಬ್ಬಂದಿಗಳಿಗೆ ತರಬೇತಿ ನೀಡಲು ಮತ್ತು ಅಧಿಕ ಒತ್ತಡದ ಪ್ರೆಶರ್ ಪಾರ್ಟ್‌ಗಳ ನಕ್ಷೆ ಮತ್ತು ವಿನ್ಯಾಸವನ್ನು ಪರಿಶೀಲಿಸಲು, ಅಗತ್ಯವಿರುವ ಮೆಟೀರಿಯಲ್‌ಗಳ ಯೋಗ್ಯತೆಯನ್ನು ಪರಿಶೀಲಿಸಲು ಹಾಗೂ ವೆಲ್ಡಿಂಗ್‌ನಲ್ಲಿ ಅನುಸರಿಸಬೇಕಾದ ಸೂಕ್ತ ಕೌಶಲ್ಯವನ್ನು ಮೈಗೂಡಿಸಿಕೊಳ್ಳಲು ಹಾಗೂ ಸೂಕ್ತ ವೆಲ್ಡಿಂಗ್ ಉಪಭೋಗ್ಯಗಳನ್ನು ಆಯ್ಕೆ ಮಾಡಿಕೊಳ್ಳುವುದು. ಪ್ರತಿ ವರ್ಷ ಬಾಯ್ಲರು ಇಂಜಿನಿಯರ್ಸ್ ಹಾಗೂ ಬಾಯ್ಲರು ಅಟೆಂಡೆಂಟ್ಸ್‌ಗೆ ಪರೀಕ್ಷೆಗಳನ್ನು ನಡೆಸಿ ಯೋಗ್ಯತಾ ಪ್ರಮಾಣ ಪತ್ರಗಳನ್ನು (Competency Certificates) ನೀಡಲಾಗುತ್ತಿದೆ. ಪ್ರತ್ಯೇಕವಾಗಿ ಬಾಯ್ಲರ್ ಮೆಟೀರಿಯಲ್ ಟೆಸ್ಟಿಂಗ್ ಅಂಡ್ ಟ್ರೈನಿಂಗ್ ಸೆಂಟರ್ ಅನ್ನು ಉಪ ನಿರ್ದೇಶಕರ ಉಸ್ತುವಾರಿಯಲ್ಲಿ ಸ್ಥಾಪಿಸಲಾಗಿದೆ. ಈ ಕೇಂದ್ರದ ಮುಖ್ಯ ಉದ್ದೇಶವು ಒಂದು ಎಲ್ಲಾ ಸೌಲಭ್ಯಗಳನ್ನೊಳಗೊಂಡ ಪ್ರಯೋಗಾಲಯವನ್ನು ಸ್ಥಾಪಿಸಿ ಬಾಯ್ಲರ್ ಮತ್ತು ಬಾಯ್ಲರ್ ಕಾಂಪೊನೇಂಟ್ಸ್ ಗಳ ತಯಾರಿಕೆಯಲ್ಲಿ ಉಪಯೋಗಿಸುವ ಎಲ್ಲಾ ವಸ್ತುಗಳನ್ನು ಪರೀಕ್ಷಿಸುವುದು, ವೆಲ್ಡರುಗಳ ತರಬೇತಿ ಮತ್ತು ಪರೀಕ್ಷೆ, ಬಾಯ್ಲರ್ ನಡೆಸುವಿಕೆ, ತಯಾರಿಕೆ ಮತ್ತು ನಿರ್ವಹಣೆ ಕುರಿತಾಗಿ ಬಾಯ್ಲರ್ ಬಳಕೆದಾರರು ನಡೆಸುವ ಸಿಬ್ಬಂದಿ ಮತ್ತು ಇತರೆ ವರ್ಗದವರಿಗೆ ತರಬೇತಿ ನೀಡುವುದು.

**ಕಾರ್ಯಚಟುವಟಿಕೆಗಳು:–**

1. ವೆಲ್ಡರ್ ಪರೀಕ್ಷೆ ಕೈಗೊಳ್ಳುವುದು ಹಾಗೂ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವುದು.
2. ಬಾಯ್ಲರ್ ಸುರಕ್ಷೆ ಮತ್ತು ಸಮರ್ಥ ನಿರ್ವಹಾಣೆಗಾಗಿ ಬಾಯ್ಲರ್ ಅಟೆಂಡೆಂಟ್ ಹಾಗೂ ಬಾಯ್ಲರ್ ಆಪರೇಷನ್ ಇಂಜಿನಿಯರ್ಸ್ ರವರುಗಳಿಗೆ ಕೌಶಲ್ಯ ಅಭಿವೃದ್ಧಿಗಾಗಿ ತರಬೇತಿ ಕಾರ್ಯಕ್ರಮಗಳನ್ನು ಕೈಗೊಳ್ಳುವುದು.
3. ಬಾಯ್ಲರ್‌ನ ಸುರಕ್ಷತಾ ಸ್ಥಾಪನೆ ಹಾಗೂ ದುರಸ್ತಿ ಸಂಬಂಧ ಬಾಯ್ಲರ್ ತಯಾರಕರು ಹಾಗೂ ಬಳಕೆದಾರರಿಗೆ ತರಬೇತಿ ಕಾರ್ಯಕ್ರಮ ನಡೆಸುವುದು.
4. ಬಾಯ್ಲರ್ ತಯಾರಿಕೆ ಸಂಬಂಧ ಅಗತ್ಯ ಉಪಕರಣ, ಅಧಿಕ ಒತ್ತಡ, ಪ್ರಶರ್ ಪಾರ್ಟ್ ಹಾಗೂ ವಿನ್ಯಸಕ್ಕೆ ಅಗತ್ಯ ಇರುವ ಇಲ್ಲಾ ಕಾಂಪೊನೆಂಟ್ಸ್‌ಗಳನ್ನು ಪರೀಕ್ಷಿಸುವುದು.
5. ತಾಂತ್ರಿಕ ಪರಿಣಿತಿ ಹೊಂದಿರುವ Certified Energy Auditors ರವರಿಂದ ಬಾಯ್ಲರ್ Energy Audit ಕೈಗೊಳ್ಳುವುದು.

## 3. ಪ್ರಸ್ತುತ ಜಾರಿಯಲ್ಲಿರುವ ಯೋಜನಾ ಕಾರ್ಯಗಳು.

**ಲೆಕ್ಕಶೀರ್ಷಿಕೆ : (2230–01–102–0–01)**

ಕಾರ್ಖಾನೆ ಕಾಯ್ದೆ, 1948ರಡಿಯಲ್ಲಿ ನೊಂದಾವಣೆಗೊಂಡಿರುವ ಕಾರ್ಖಾನೆಗಳ ಪರಿವೀಕ್ಷಣೆಗಳನ್ನು ನಡೆಸುವ ಮುಖಾಂತರ ಕೈಗಾರಿಕೆಯಲ್ಲಿ ದುಡಿಯುವ ಎಲ್ಲಾ ಕಾರ್ಮಿಕರಿಗೂ ಆರೋಗ್ಯ, ಸುರಕ್ಷತೆ, ಕಲ್ಯಾಣ, ವೇತನ ಸಂದಾಯ ಕಾಯ್ದೆ, 1936, ಮತ್ತು ಪ್ರಸೂತಿ ಸೌಲಭ್ಯ ಕಾಯ್ದೆ, 1961 ರಡಿಯಲ್ಲಿ ಸಕಾಲದಲ್ಲಿ ವೇತನ ಸಂದಾಯ, ಹೆರಿಗೆ ರಜೆ / ಭತ್ಯೆ, ಇತ್ಯಾದಿ ಸೌಲಭ್ಯಗಳನ್ನು ಒದಗಿಸಿರುವ ಬಗ್ಗೆ ಕಾನೂನುಗಳನ್ನು ಅನುಷ್ಠಾನಗೊಳಿಸುವುದು ಹಾಗೂ ಇಂಡಿಯನ್ ಬಾಯ್ಲರ್ಸ್ ಕಾಯ್ದೆ, 1923 ಮತ್ತು ಅದರಡಿಯಲ್ಲಿನ ನಿಯಮಗಳನ್ವಯ ನೋಂದಾಯಿತ ಬಾಯ್ಲರುಗಳ ಮತ್ತು ಪ್ರೆಶರ್ ಪಾರ್ಟ್ಸ್‌ಗಳ ಸುರಕ್ಷತೆ, ಗುಣಮಟ್ಟಗಳನ್ನು ಪರಿಶೀಲಿಸಿ ದೃಢೀಕರಿಸುವುದು

| ಕೆಲಸದ ಸ್ಥಿತಿ ಮತ್ತು ಸುರಕ್ಷತೆ, ಕಾರ್ಖಾನೆಗಳ ಪರಿವೀಕ್ಷಕರು | ಗುರಿ (01.01.2020 ರಿಂದ 31.12.2020) | | ಸಾಧನೆ (01.01.2020 ರಿಂದ 31.12.2020) | |
|---|---|---|---|---|
| | ಭೌತಿಕ | ಆರ್ಥಿಕ (ರೂ. ಲಕ್ಷಗಳಲ್ಲಿ) | ಭೌತಿಕ | ಆರ್ಥಿಕ (ರೂ. ಲಕ್ಷಗಳಲ್ಲಿ) |
| | 10670 | 1498.73 | 9699 | 1350.79 |

## 4. ಪೂರಕ ಚಟುವಟಿಕೆಗಳು:

### 4.1 ಆಡಳಿತದಲ್ಲಿ ಕನ್ನಡ ಬಳಕೆ:–

ಸರ್ಕಾರದ ನಿರ್ದೇಶನಗಳಿಗನುಗುಣವಾಗಿ ಆಡಳಿತದಲ್ಲಿ ಕನ್ನಡ ಬಳಸುವಲ್ಲಿ ಇಲಾಖೆಯು ಹೆಚ್ಚಿನ ಆಸ್ಥೆಯನ್ನು ವಹಿಸಿರುತ್ತದೆ. ನ್ಯಾಯಾಲಯಗಳ ಪ್ರಕರಣಗಳಲ್ಲಿ, ಆಯೋಗಗಳಿಗೆ ವರದಿ ಸಲ್ಲಿಸುವುದು, ಅಂತರ ರಾಜ್ಯ ಸಂವಹನ, ಮಾಹಿತಿ ಹಕ್ಕು ಕಾಯ್ದೆಯ ಆಯ್ದ ಪ್ರಕರಣಗಳು, ಇತ್ಯಾದಿ ಹೊರತು ಪಡಿಸಿದರೆ ಇಲಾಖೆಯಲ್ಲಿ ಕನ್ನಡವನ್ನು ಯಥೇಚ್ಛವಾಗಿ ಬಳಸಲಾಗುತ್ತಿದೆ.

ಪ್ರಸ್ತುತ ಸಾಲಿನಲ್ಲಿ ಇಲಾಖೆಯ ಕೇಂದ್ರ ಕಛೇರಿಯಲ್ಲಿ 56472 ಪತ್ರಗಳು ಸ್ವೀಕೃತಿಯಾಗಿರುತ್ತವೆ ಮತ್ತು 33842 ಪತ್ರಗಳು ರವಾನೆಯಾಗಿರುತ್ತವೆ, ಇವುಗಳಲ್ಲಿ 29688 ಪತ್ರಗಳು ಕನ್ನಡದಲ್ಲಿ ರವಾನೆಯಾಗಿರುತ್ತದೆ. ಇಲಾಖೆಯ ವಿಭಾಗೀಯ ಕಛೇರಿಗಳಲ್ಲಿ 37648 ಪತ್ರಗಳು ಸ್ವೀಕೃತಿಯಾಗಿರುತ್ತವೆ ಮತ್ತು 23228 ಪತ್ರಗಳು ರವಾನೆಯಾಗಿರುತ್ತವೆ, ಇವುಗಳಲ್ಲಿ 20211 ಪತ್ರಗಳು ಕನ್ನಡದಲ್ಲಿ ರವಾನೆಯಾಗಿರುತ್ತವೆ.

### 4.2 ಮಾಹಿತಿ ಹಕ್ಕು ಅಧಿನಿಯಮ 2005:–

ಮಾಹಿತಿ ಹಕ್ಕು ಅಧಿನಿಯಮ, 2005ರಡಿ, ಇಲಾಖೆಯ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಪಟ್ಟಿಯನ್ನು ಪ್ರಕಟಿಸಲಾಗಿದೆ. ಇಲಾಖೆಯ ಒಬ್ಬರು ಅಪರ ನಿರ್ದೇಶಕರು ಹಾಗೂ ಐದು ಜಂಟಿ ನಿರ್ದೇಶಕರುಗಳನ್ನು ಮೊದಲ ಮೇಲ್ಮನವಿ ಪ್ರಾಧಿಕಾರಿಗಳನ್ನಾಗಿ ನೇಮಿಸಲಾಗಿದೆ. ಇಲಾಖೆಯಲ್ಲಿ 54 ಅಧಿಕಾರಿಗಳನ್ನು ಸಾರ್ವಜನಿಕ ಮಾಹಿತಿ ಅಧಿಕಾರಿಗಳನ್ನಾಗಿ ನೇಮಿಸಲಾಗಿದೆ. ಪ್ರಸ್ಥುತ ಸಾಲಿನಲ್ಲಿ, ಕಾಯ್ದೆ ಅಡಿ ಮಾಹಿತಿ ಕೋರಿ 259 ಅರ್ಜಿಗಳು ಸ್ವೀಕೃತವಾಗಿದ್ದು, 255 ಅರ್ಜಿಗಳನ್ನು ಮಾಹಿತಿ ನೀಡಿ ವಿಲೇ ಮಾಡಲಾಗಿರುತ್ತದೆ ಹಾಗೂ ಒಟ್ಟು ರೂ. 2748/– ಶುಲ್ಕ ಕಾಯ್ದೆಯಡಿ ಸ್ವೀಕರಿಸಲಾಗಿರುತ್ತದೆ.

### 4.3 ಸಾರ್ವಜನಿಕ ಕುಂದುಕೊರತೆಗಳ ಕೋಶ:–

ಸಾರ್ವಜನಿಕ ಕುಂದುಕೊರತೆಗಳನ್ನು ನಿವಾರಿಸಲು ಸಾರ್ವಜನಿಕ ಕುಂದುಕೊರತೆಗಳ ಕೋಶವನ್ನು ಸ್ಥಾಪಿಸಲಾಗಿದ್ದು, ಕಾರ್ಖಾನೆ ಮತ್ತು ಬಾಯ್ಲರುಗಳ ಅಪರ ನಿರ್ದೇಶಕರು ರವರು ಸದರಿ ಕೋಶದ ಮುಖ್ಯಸ್ಥರಾಗಿರುತ್ತಾರೆ. ಸರ್ಕಾರದ ನಿರ್ದೇಶನದಂತೆ ಸದರಿ ಕೋಶವು ಕಾರ್ಯನಿರ್ವಹಿಸುತ್ತಿದ್ದು, ಇ–ಜನಸ್ಪಂದನ, ಸಕಾಲ ಇತ್ಯಾದಿಗೆ ಸಂಬಂಧಿಸಿದ ಸಾರ್ವಜನಿಕ ಕುಂದುಕೊರತೆಗಳ ನಿವಾರಣೆಗೆ ಕ್ರಮವಹಿಸಲಾಗುತ್ತಿದೆ. ಸಾಲಿನಲ್ಲಿ ಸಾರ್ವಜನಿಕ ದೂರುಗಳ ನಿವಾರಣಾ ವ್ಯವಸ್ಥೆಯಡಿಯಲ್ಲಿ ಇಲ್ಲಿಯವರೆಗೆ 19 ದೂರುಗಳು ಸ್ವೀಕೃತವಾಗಿದ್ದು, ಅವುಗಳನ್ನು ಇತ್ಯರ್ಥಪಡಿಸಲಾಗಿರುತ್ತದೆ.

### 4.4 ಇ–ಆಡಳಿತ:–

ಇಲಾಖೆಯು ಇ–ಆಡಳಿತವನ್ನು ಜಾರಿಗೆ ತರುವಲ್ಲಿ ಸಕ್ರಿಯವಾಗಿ ತೊಡಗಿರುತ್ತದೆ. ಇಲಾಖೆಯು ತನ್ನದೇ ಆದ ವೆಬ್–ಪೋರ್ಟಲ್ ಹೊಂದಿರುತ್ತದೆ. ಸದರಿ ಪೋರ್ಟಲ್ ಮುಖೇನ ಇಲಾಖೆಯ ಆನ್‌ಲೈನ್ ಸೇವೆಗಳನ್ನು ನೀಡಲಾಗುತ್ತಿದೆ. ಇಲಾಖೆಯ ಸೇವೆಗಳಿಗೆ ಶುಲ್ಕಗಳನ್ನು ಆನ್‌ಲೈನ್ ಇ–ಪೇಮೆಂಟ್ ಮಾಡಲು ಅನುವು ಮಾಡಿಕೊಡಲಾಗಿದೆ. ಇಲಾಖೆಯ ಪ್ರಮುಖ ಸೇವೆಗಳನ್ನು ಈಗಾಗಲೇ ಸಕಾಲ ಯೋಜನೆಯ ವ್ಯಾಪ್ತಿಯಡಿಯಲ್ಲಿ ತರಲಾಗಿದ್ದು, ಸೇವೆಯನ್ನು ನೀಡಲು ಕಾಲಮಿತಿಯನ್ನು ನಿಗಧಿಪಡಿಸಲಾಗಿರುತ್ತದೆ. ಭಾಗೀದಾರರು ಕಛೇರಿಗಳಿಗೆ ಭೇಟಿ ನೀಡದೇ ತ್ವರಿತವಾಗಿ, ಪಾರದರ್ಶಕವಾಗಿ, ಇಲಾಖೆಯ ಸೇವೆಗಳನ್ನು ಇಲಾಖೆಯ ಆನ್–ಲೈನ್ ಪೋರ್ಟಲ್ ಮುಖಾಂತರ ಪಡೆದುಕೊಳ್ಳಲು ಅನುವು ಮಾಡಿಕೊಡಲಾಗಿರುತ್ತದೆ. ಇಲಾಖೆಯ ಸೇವೆಗಳ ಶುಲ್ಕ ಆನ್‌ಲೈನ್ ಇ–ಪೇಮೆಂಟ್ ಮೂಲಕ ಪಡೆಯಲು ಖಜಾನೆ ಜೊತೆ ಆನ್–ಲೈನ್ ಸಂಯೋಜನೆ ಮಾಡಲಾಗಿರುತ್ತದೆ. ಸೇವೆಗಳನ್ನು ಸಕಾಲದಲ್ಲಿ ನೀಡಲು ಸಕಾಲ ಪೋರ್ಟಲ್‌ನೊಂದಿಗೆ ಆನ್‌ಲೈನ್ ಸಂಯೋಜನೆ ಮಾಡಲಾಗಿರುತ್ತದೆ ಹಾಗೂ ಡಿಜಿಟಲ್ ಸಹಿಯೊಂದಿಗೆ ಅನುಮೋದನೆಗಳನ್ನು ನೀಡಲು ಕ್ರಮ ಕೈಗೊಳ್ಳಲಾಗಿದೆ. ಮುಂದಿನ ದಿನಗಳಲ್ಲಿ, ಇಲಾಖೆಯು ಹೆಚ್ಚಿನ ಸೇವೆಗಳನ್ನು ನಾಗರೀಕರಿಗೆ ಆನ್–ಲೈನ್ ಮೂಲಕ ಒದಗಿಸಲು ಯೋಜಿಸಿದ್ದು, ಸದರಿ ಪೋರ್ಟಲ್ ಅನ್ನು ನಾಗರೀಕ ಸ್ನೇಹಿಯಾಗಿ ಉನ್ನತೀಕರಿಸಿ ಅಭಿವೃದ್ಧಿಪಡಿಸಲಾಗುತ್ತಿದೆ.

ಇಲಾಖಾ ಪರಿವೀಕ್ಷಣಾ ಪದ್ದತಿಯಲ್ಲಿ ಈ ಕೆಳಗಿನ ಸುಧಾರಣಾ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಕಾರ್ಖಾನೆ ಮತ್ತು ಬಾಯ್ಲರುಗಳ ಕಾಯ್ದೆಗಳಡಿ ಸ್ವಯಂ ಸರ್ಟಿಫಿಕೇಷನ್ ಮತ್ತು ಮೂರನೇ ಪಾರ್ಟಿ ಸರ್ಟಿಫಿಕೇಷನ್ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.
2. ಕಾರ್ಖಾನೆಗಳ ಪರಿವೀಕ್ಷಣೆಗಳನ್ನು ಗಣಕೀಕೃತ ರ್‍ಯಾಂಡಂ ಸ್ಯಾಂಪ್ಲಿಂಗ್ ಆಯ್ಕೆ ಪದ್ದತಿ, ರಿಸ್ಕ್ ಬೇಸ್ಡ್ ಪರಿವೀಕ್ಷಣಾ ಪದ್ದತಿಗಳನ್ನು ಅಳವಡಿಸಿ, ನಿಯಮಿತ ಪರಿವೀಕ್ಷಣೆಗಳ ಪದ್ದತಿಯನ್ನು ನಿವಾರಿಸಲಾಗಿರುತ್ತದೆ.

**4.5 ಈಸ್ ಆಫ್ ಡೂಯಿಂಗ್ ಬಿಸಿನೆಸ್ ಪರಿಕ್ರಮಗಳು:**

ಕೇಂದ್ರ ಸರ್ಕಾರದ ಈಸ್ ಆಫ್ ಡೂಯಿಂಗ್ ಬಿಸಿನೆಸ್ ಪರಿಕ್ರಮದಡಿಯಲ್ಲಿ ಭಾಗೀದಾರರಿಗೆ ಅನುಕೂಲ ಕಲ್ಪಿಸಿಕೊಟ್ಟು ಇಲಾಖೆಯ ಸೇವೆಗಳನ್ನು ತ್ವರಿತವಾಗಿ ಮತ್ತು ಪಾರದರ್ಶಕತೆಯಿಂದ ನೀಡಲು ಆನ್-ಲೈನ್ ಮುಖಾಂತರ ಕಾರ್ಖಾನೆಗಳ ನಕ್ಷಾನುಮೋದನೆ, ಕಾರ್ಖಾನೆಗಳ ನೋಂದಣಿ, ಕಾರ್ಖಾನೆಗಳ ಲೈಸನ್ಸ್ ನವೀಕರಣ, ಬಾಯ್ಲರುಗಳ ನೋಂದಣಿ, ಎಕಾನಾಮೈಸರ್ಸ್ ಮತ್ತು ಸ್ಟೀಂ ಪೈಪ್‌ಲೈನ್ಸ್ ನೋಂಧಾವಣೆ, ಬಾಯ್ಲರ್ ಕಾಯ್ದೆಯಲ್ಲಿನ ವಾರ್ಷಿಕ ಪರಿವೀಕ್ಷಣೆಯಡಿ ಬಾಯ್ಲರ್ ಪ್ರಮಾಣ ಪತ್ರ ನೀಡುವಿಕೆ ಇತ್ಯಾದಿ ಸೇವೆಗಳನ್ನು ನೀಡಲಾಗುತ್ತಿದೆ. ಈಸ್ ಆಫ್ ಡೂಯಿಂಗ್ ಬಿಸಿನೆಸ್ ಪರಿಕ್ರಮದಡಿಯಲ್ಲಿ ಕಾರ್ಖಾನೆಗಳ ನೋಂದಣಿ ಹಾಗೂ ನವೀಕರಣ ಅವಧಿಯನ್ನು 15 ವರ್ಷಗಳವರೆಗೆ ವಿಸ್ತರಿಸಲಾಗಿದೆ. ಕಾರ್ಖಾನೆಗಳ ಲೈಸನ್ಸ್ ನವೀಕರಣ ಪ್ರಕ್ರಿಯೆಯನ್ನು ರದ್ದುಪಡಿಸಿ, ಸ್ವಯಂ ನವೀಕರಣ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ. ಬಾಯ್ಲರ್ ಆಪರೇಷನ್ ಇಂಜಿನೀಯರ್ಸ್‌ಗಳಿಂದ ಬಾಯ್ಲರ್‌ಗಳ ವಾರ್ಷಿಕ ತಪಾಸಣೆ ಮಾಡಿಸಲು ಅವಕಾಶ ಮಾಡಿಕೊಡಲಾಗಿದೆ. ಈಸ್ ಆಫ್ ಡೂಯಿಂಗ್ ಬಿಸಿನೆಸ್ ಪರಿಕ್ರಮದಡಿಯಲ್ಲಿ ಸೂಚಿಸಲಾಗಿದ್ದ ಎಲ್ಲಾ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಿ, ರಾಜ್ಯವು ಕೈಗಾರಿಕಾ ಸ್ನೇಹಿಯಾಗಲು ಮತ್ತು ಉದ್ಯೋಗವಕಾಶಗಳನ್ನು ವೃದ್ಧಿಸಲು ಕ್ರಮ ಕೈಗೊಂಡಿದ್ದು, ಈ ಕೆಳಗಿನ ಸೇವೆಗಳನ್ನು ನಾಗರೀಕರಿಗೆ ಆನ್-ಲೈನ್ ಮೂಲಕ ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.

**ಅ) ಕಾರ್ಖಾನೆಗಳ ವಿಭಾಗದಿಂದ ಲಭ್ಯವಿರುವ ಆನ್-ಲೈನ್ ಸೇವೆಗಳು:**

- ಕಾರ್ಖಾನೆಗಳ ನಕ್ಷಾನುಮೋದನೆ.
- ಕಾರ್ಖಾನೆಗಳ ನೋಂದಣೆ ಮತ್ತು ಲೈಸನ್ಸ್ ನೀಡುವಿಕೆ.
- ಕಾರ್ಖಾನೆಗಳ ಲೈಸನ್ಸ್ ಸ್ವಯಂ ನವೀಕರಣ.
- ಕಾರ್ಖಾನೆಗಳ ಲೈಸನ್ಸ್ ತಿದ್ದುಪಡಿ.
- ಕಾರ್ಖಾನೆಗಳ ಲೈಸನ್ಸ್ ವರ್ಗಾವಣೆ.
- ವರ್ಗಾವಣೆ.

**ಆ) ಬಾಯ್ಲರ್ ವಿಭಾಗದಿಂದ ಲಭ್ಯವಿರುವ ಆನ್-ಲೈನ್ ಸೇವೆಗಳು:**

- ಬಾಯ್ಲರ್, ಎಕಾನಾಮೈಸರ್ಸ್ ಅಂಡ್ ಸ್ಟೀಮ್ ಪೈಪ್‌ಲೈನ್ಸ್‌ಗಳ ನೋಂದಾವಣೆ.
- ಬಾಯ್ಲರ್ ಕಾಯ್ದೆಯ ವಾರ್ಷಿಕ ಪರಿವೀಕ್ಷಣೆಯಡಿ ಬಾಯ್ಲರ್ ಪ್ರಮಾಣ ಪತ್ರ ನೀಡುವಿಕೆ.
- ಬಾಯ್ಲರ್ ತಯಾರಕರ ಮಾನ್ಯತಾ ಪ್ರಮಾಣ ಪತ್ರ ನೀಡುವಿಕೆ ಮತ್ತು ನವೀಕರಣ.
- ಬಾಯ್ಲರ್ ರಿಪೇರರ್/ಎರೆಕ್ಟರ್ ಮಾನ್ಯತಾ ಪ್ರಮಾಣ ಪತ್ರ ನೀಡುವಿಕೆ ಮತ್ತು ನವೀಕರಣ.

**4.6 ಸಕಾಲ: ನಾಗರೀಕರಿಗೆ ಸೇವೆಗಳ ಖಾತರಿ ಅಧಿನಿಯಮ:**

ಇಲಾಖೆಯ ವ್ಯಾಪ್ತಿಯ 10 ಸೇವೆಗಳನ್ನು ನಾಗರೀಕರಿಗೆ ಸೇವಾ ಖಾತರಿ ಅಧಿನಿಯಮದ ಅಡಿಯಲ್ಲಿ ನಿಗಧಿತ ಕಾಲಮಿತಿಯಲ್ಲಿ ಅರ್ಜಿಗಳನ್ನು ವಿಲೇವಾರಿ ಮಾಡುವುದರ ಮುಖಾಂತರ ಸೇವೆಗಳನ್ನು ನೀಡಲಾಗುತ್ತಿದೆ. 2020ನೇ ಸಾಲಿನಲ್ಲಿ ಒಟ್ಟು 11,382 ಅರ್ಜಿಗಳು ಸಕಾಲದ ಅಡಿಯಲ್ಲಿ ಸ್ವೀಕರಿಸಿದ್ದು, ಅವುಗಳಲ್ಲಿ 10,439 ಅರ್ಜಿಗಳನ್ನು ವಿಲೇವಾರಿ ಮಾಡಿರುತ್ತದೆ. ಹಾಗೂ ಉಳಿದ ಅರ್ಜಿಗಳನ್ನು ನಿಗಧಿತ ಅವಧಿಯೊಳಗೆ ವಿಲೇವಾರಿ ಮಾಡಲು ಕ್ರಮ ವಹಿಸಲಾಗಿದೆ.

**4.7 ಕಾರ್ಮಿಕ ಸಹಾಯವಾಣಿ:**

ಕಾರ್ಮಿಕರಿಗೆ ಅವರ ಕೆಲಸದ ಸ್ಥಳಗಳಲ್ಲಿನ ಅನಾನುಕೂಲತೆಗಳನ್ನು ಹಾಗೂ ತೊಂದರೆಗಳನ್ನು ಇಲಾಖೆಯ ಗಮನಕ್ಕೆ ತಂದು ಪರಿಹಾರವನ್ನು ಪಡೆದುಕೊಳ್ಳಲು ಹಾಗೂ ಅವರು ಸುರಕ್ಷತೆ ಮತ್ತು ಆರೋಗ್ಯದ ಬಗ್ಗೆ ಮಾಹಿತಿ ಪಡೆಯಲು ಸಹಾಯವಾಗುವಂತೆ 24 X 7 ಸಹಾಯವಾಣಿಯನ್ನು ಪ್ರಾರಂಭಿಸಲಾಗಿದ್ದು, ಇದು ಕಾರ್ಖಾನೆಗಳ ಮಾಲೀಕರಿಗೂ ಸಹ ಇಲಾಖೆಯ ವಿವಿಧ ಸೇವೆಗಳ ಕಾರ್ಯವಿಧಾನಗಳ ಬಗ್ಗೆ ಮಾಹಿತಿ ಪಡೆಯಲು ಮತ್ತು ಸೇವೆಗಳನ್ನು ಪಡೆಯಲು ಸಹಕಾರಿಯಾಗುತ್ತಿದೆ. ಇದು ಕಾರ್ಖಾನೆಗಳಲ್ಲಿನ ತುರ್ತು ಪರಿಸ್ಥಿತಿಯನ್ನು ನಿರ್ವಹಿಸುವಲ್ಲಿ ತುರ್ತು ಪರಿಸ್ಥಿತಿ ನಿಯಂತ್ರಣ ಕೇಂದ್ರವಾಗಿಯೂ ಕಾರ್ಯನಿರ್ವಹಿಸಲಿದೆ.

**5. ಆಯವ್ಯಯದ (Budget) ಮಾಹಿತಿ:–**

ಜಾರಿಯಲ್ಲಿರುವ ನಿಯಮಗಳನ್ವಯ ಇಲಾಖೆ ಒದಗಿಸುತ್ತಿರುವ ವಿವಿಧ ಸೇವೆಗಳಿಗೆ (ಕಾರ್ಖಾನೆ / ಬಾಯ್ಲರುಗಳ ನಕ್ಷಾನುಮೋದನೆ, ನೋಂದಣಿ, ಲೈಸನ್ಸ್ ನವೀಕರಣ, ಬಾಯ್ಲರು ಪರಿವೀಕ್ಷಣಾ ಶುಲ್ಕ ಇತ್ಯಾದಿ) ಸೇವಾಶುಲ್ಕಗಳನ್ನು ವಿಧಿಸಲಾಗುತ್ತಿದೆ. ಅದೇ ರೀತಿ ಅಧಿಕಾರಿಗಳ / ಸಿಬ್ಬಂದಿಯ ವೇತನ, ಭತ್ಯೆಗಳು ಇತರೆ ನಿರ್ವಹಣಾ ವೆಚ್ಚಗಳನ್ನು ಭರಿಸಲು ಮಾತ್ರ ಇಲಾಖೆಗೆ ಪ್ರತಿ ವರ್ಷ ಅನುದಾನ ಮಂಜೂರಾಗುತ್ತಿದೆ. ಯಾವುದೇ ಅಭಿವೃದ್ಧಿ ಕಾರ್ಯಕ್ರಮಗಳು/ಯೋಜನೆಗಳು ಇಲಾಖೆಯು ಜಾರಿಗೊಳಸುತ್ತಿಲ್ಲ.

2020ನೇ ಸಾಲಿನ ವಿವಿಧ ಬಾಬ್ತುಗಳಿಂದ ಶುಲ್ಕದ ರೂಪದಲ್ಲಿ ಸ್ವೀಕೃತವಾದ ರಾಜಸ್ವ ದ ವಿವರ ಮುಂದಿನಂತಿದೆ.

(ರೂ. ಲಕ್ಷಗಳಲ್ಲಿ)

| ರಾಜಸ್ವ ಸ್ವೀಕೃತಿ ಬಾಬ್ತುಗಳು | ಗುರಿ | ಸಾಧನೆ (31–12–2020ರ ಅಂತ್ಯಕ್ಕೆ) |
|---|---|---|
| 1. 0230–00–104–0–00 ಫೀ ರಿಯಲೈಸ್ಡ್ ಅಂಡರ್ ಫ್ಯಾಕ್ಟರೀಸ್ ಆಕ್ಟ್ | 2500 | 2763.33 |
| 2. 0230–00–103–0–00 ಫೀ ಫಾರ್ ಇನ್ಸಪೆಕ್ಷನ್ ಆಫ್ ಸ್ಟೀಂ ಬಾಯ್ಲರ್ಸ್ | 430 | 483.69 |
| ಒಟ್ಟು | 2930 | 3247.02 |

ಅದೇ ರೀತಿ ದಿನಾಂಕ: 01.01.2020 ರಿಂದ 31.12.2020ರ ಯೋಜನೇತರ ಅಡಿ ಇಲಾಖೆಗೆ ಒದಗಿಸಲಾಗಿರುವ ಆಯವ್ಯಯದ ವಿವರ ಕೆಳಕಂಡಂತಿರುತ್ತದೆ.


(ರೂ. ಲಕ್ಷಗಳಲ್ಲಿ)

| ವೆಚ್ಚದ ಬಾಬ್ತುಗಳು | (31–12–2020 ರ ಅಂತ್ಯಕ್ಕೆ) | |
|---|---|---|
| | ಅನುದಾನ | ಖರ್ಚು |
| 2230–01–102–0–01 ಯೋಜನೇತರ | 1508.00 | 899.04 |
| **ಒಟ್ಟು** | **1508.00** | **899.04** |

ವೆಬ್‌ಸೈಟ್ ವಿಳಾಸ: ಭಾಗೀದಾರರು (Stakeholders) ಹೆಚ್ಚಿನ ಮಾಹಿತಿಗಾಗಿ ಹಾಗೂ ಆನ್‌ಲೈನ್ ಸೇವೆಗಾಗಿ ಇಲಾಖೆಯ ವೆಬ್‌ಸೈಟ್ ವಿಳಾಸ:– https://esuraksha.karnataka.gov.in ಗೆ ಭೇಟಿ ನೀಡಬಹುದಾಗಿದೆ.

ನಿರ್ದೇಶಕರು,
ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ
ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ, ಬೆಂಗಳೂರು.

“ಅನುಬಂಧ–ಅ”




ಕಾಉನಿ: ಕಾರ್ಖಾನೆಗಳ ಉಪ ನಿರ್ದೇಶಕರು
ಬಾಉನಿ: ಬಾಯ್ಲರುಗಳು ಉಪ ನಿರ್ದೇಶಕರು
ಕಾಹಿಸನಿ: ಕಾರ್ಖಾನೆಗಳ ಹಿರಿಯ ಸಹಾಯಕ ನಿರ್ದೇಶಕರು
ಬಾಹಿಸನಿ: ಬಾಯ್ಲರುಗಳ ಸಹಾಯಕ ನಿರ್ದೇಶಕರು
ಕಾಸನಿ: ಕಾರ್ಖಾನೆಗಳ ಸಹಾಯಕ ನಿರ್ದೇಶಕರು
ಬಾಸನಿ: ಬಾಯ್ಲರುಗಳ ಸಹಾಯಕ ನಿರ್ದೇಶಕರು
ಪ.ವ್ಯ: ಪತ್ರಾಂಕಿತ ವ್ಯವಸ್ಥಾಪಕರು

ಅನುಬಂಧ-'ಆ'

ಅಂಕಿ ಅಂಶಗಳು

ಅವಧಿ 01.01.2020 ರಿಂದ 31.12.2020ರ ವರೆಗೆ

ಕಾರ್ಖಾನೆ ವಿಭಾಗ:-

ನೋಂದಾಯಿತ ಕಾರ್ಖಾನೆಗಳ ವಿವರಗಳು

| ಕ್ರಸಂ | ಕಾರ್ಯಪ್ರಗತಿ ವಿವರ | ಸಂಖ್ಯೆ |
|---|---|---|
| 1 | ಒಟ್ಟು ನೋಂದಾವಣೆಯಾಗಿರುವ ಕಾರ್ಖಾನೆಗಳ ಸಂಖ್ಯೆ | 16,917 |
| 2 | ನೋಂದಾಯಿತ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಸಂಖ್ಯೆ | 16,55,617 |
| 3 | ಪ್ರಸ್ತುತ ಸಾಲಿನಲ್ಲಿ ಲೈಸನ್ಸು ರದ್ದುಪಡಿಸಿ ಪಟ್ಟಿಯಿಂದ ತೆಗೆದು ಹಾಕಲ್ಪಟ್ಟ ಕಾರ್ಖಾನೆಗಳ ಸಂಖ್ಯೆ | 652 |
| 4 | ಆಯಾ ಸಾಲಿನಲ್ಲಿ ನೋಂದಾವಣೆಯಾಗಿರುವ ಕಾರ್ಖಾನೆಗಳ ಸಂಖ್ಯೆ | 749 |
| 5 | ಅಪಾಯಕಾರಿ ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿರುವ ಕಾರ್ಖಾನೆಗಳ ಸಂಖ್ಯೆ | 1398 |
| 6 | ಅತ್ಯಂತ ಅಪಾಯಕಾರಿ ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿರುವ ಕಾರ್ಖಾನೆಗಳ ಸಂಖ್ಯೆ | 80 |
| 7 | ಅನುಮೋದನೆಗೊಂಡಿರುವ ಆನ್ ಸೈಟ್ ಎಮರ್ಜೆನ್ಸಿ ಪ್ಲಾನ್ಸ್ | 80 |
| 8 | ಜಿಲ್ಲಾಡಳಿತದಿಂದ ತಯಾರಾಗಿರುವ ಆಫ್ ಸೈಟ್ ಎಮರ್ಜೆನ್ಸಿ ಪ್ಲಾನ್ಸ್ | 19 |

| ಕ್ರಸಂ | ನಕ್ಷೆಗಳ ಅನುಮೋದನೆ | ಸಂಖ್ಯೆ |
|---|---|---|
| 1 | ವರ್ಷದ ಪ್ರಾರಂಭದಲ್ಲಿ ಬಾಕಿ ಇದ್ದ / ಇರುವ ನಕ್ಷೆಗಳ ಸಂಖ್ಯೆ | 63 |
| 2 | ಆಯಾ ಸಾಲಿನಲ್ಲಿ ಪಡೆದಿರುವ ನಕ್ಷೆಗಳ ಸಂಖ್ಯೆ | 1582 |
| 3 | ಆಯಾ ಸಾಲಿನಲ್ಲಿ ಅನುಮೋದಿಸಲಾದ ನಕ್ಷೆಗಳ ಸಂಖ್ಯೆ | 1497 |
| 4 | ವರ್ಷಾಂತ್ಯದಲ್ಲಿ ಅನುಮೋದನೆಗಾಗಿ ಬಾಕಿ ಇದ್ದ / ಇರುವ ನಕ್ಷೆಗಳ ಸಂಖ್ಯೆ | 148 |

| ಕ್ರಸಂ | ಪರಿವೀಕ್ಷಣೆಗಳು | ಸಂಖ್ಯೆ |
|---|---|---|
| 1 | ಪರಿವೀಕ್ಷಣೆ ನಡೆಸಿದ ಕಾರ್ಖಾನೆಗಳ ಸಂಖ್ಯೆ | 5724 |
| 2 | ಪರಿವೀಕ್ಷಣಾ ಸಮಯದಲ್ಲಿ ಕಂಡು ಬಂದ ಉಲ್ಲಂಘನೆಗಳು | 803 |
| 3 | ಕಾರಣ ಕೇಳಿ ಜಾರಿ ಮಾಡಿದ ನೋಟೀಸುಗಳ ಸಂಖ್ಯೆ | 342 |

| ಕ್ರಸಂ | ಮೊಕದ್ದಮೆಗಳು | ಸಂಖ್ಯೆ |
|---|---|---|
| 1 | ಹೂಡಿದ ಮೊಕದ್ದಮೆಗಳ ಸಂಖ್ಯೆ | 142 |
| 2 | ತೀರ್ಮಾನಿಸಿದ ಮೊಕದ್ದಮೆಗಳಲ್ಲಿ ಆಪಾದಿತರಿಗೆ ಶಿಕ್ಷೆಯಾದ ಪ್ರಕರಣಗಳು | 21 |
| 3 | ದಂಡ ರೂಪದಲ್ಲಿ ವಸೂಲಾದ ಮೊತ್ತ(ರೂಪಾಯಿಗಳಲ್ಲಿ) | 6,02,500/- |
| 4 | ನ್ಯಾಯಾಲಯದಿಂದ ಹಿಂದಕ್ಕೆ ಪಡೆದ ಮೊಕದ್ದಮೆಗಳ ಸಂಖ್ಯೆ | - |

| ಕ್ರಸಂ | ವಿನಾಯಿತಿಗಳು | ಸಂಖ್ಯೆ |
|---|---|---|
| 1 | ಕಾರ್ಖಾನೆಗಳ ಕಾಯ್ದೆ, 1948ರ ಪ್ರಕರಣ 65(2) ರಡಿಯಲ್ಲಿ ವಿನಾಯಿತಿ ನೀಡಿದ ಅರ್ಜಿಗಳ ಸಂಖ್ಯೆ | 413 |
| 2 | ವಿನಾಯ್ತಿ ನೀಡಲು ತಿರಸ್ಕರಿಸಲಾದ ಕಾರ್ಖಾನೆಗಳ ಸಂಖ್ಯೆ | 03 |

| ಕ್ರ.ಸಂ | ದೂರುಗಳು | ಸಂಖ್ಯೆ |
|---|---|---|
| 1 | ಪಡೆದ ದೂರುಗಳು / ಫಿರ್ಯಾದುಗಳ ಸಂಖ್ಯೆ | 59 |
| 2 | ವಿಲೇವಾರಿಯಾದ ದೂರುಗಳ ಸಂಖ್ಯೆ | 54 |

| ಕ್ರ.ಸಂ | ಅಪಘಾತಗಳು | ಸಂಖ್ಯೆ |
|---|---|---|
| 1 | ವರದಿಯಾದ ಒಟ್ಟು ಅಪಘಾತಗಳ ಸಂಖ್ಯೆ | 187 |
| 2 | ವರ್ಷದಲ್ಲಿ ಸಂಭವಿಸಿದ ಮಾರಣಾಂತಿಕ ಅಪಘಾತಗಳ ಸಂಖ್ಯೆ | 50 |
| 3 | ವರದಿಯಾದ ಗುರುತರ ಅಪಘಾತಗಳ ಸಂಖ್ಯೆ | 12 |
| 4 | ವರದಿಯಾದ ಬೆಂಕಿ ಅಪಘಾತಗಳ ಸಂಖ್ಯೆ | 08 |

| ಕ್ರ.ಸಂ | ಹೊಸ ಕಾರ್ಖಾನೆಗಳ ಅನ್ವೇಷಣೆ | ಸಂಖ್ಯೆ |
|---|---|---|
| 1 | ಪತ್ತೆ ಹಚ್ಚಿದ ಅನೋಂದಾಯಿತ ಕಾರ್ಖಾನೆಗಳ ಸಂಖ್ಯೆ | 191 |

| ಕ್ರ.ಸಂ | ಸಾರ್ವಜನಿಕ ಕುಂದುಕೊರತೆ ನಿವಾರಣೆ | ಸಂಖ್ಯೆ |
|---|---|---|
| 1 | ಸಾರ್ವಜನಿಕ ಕುಂದುಕೊರತೆಗಳ ಬಗ್ಗೆ ಸ್ವೀಕೃತವಾದ ದೂರುಗಳು | 19 |
| 2 | ವಿಲೇ ಆದ ದೂರುಗಳು | 19 |
| 3 | ಬಾಕಿ ಇರುವ ಸಾರ್ವಜನಿಕ ದೂರುಗಳು | – |

| ಕ್ರ.ಸಂ | ಮಾಹಿತಿ ಹಕ್ಕು ಅಧಿನಿಯಮ, 2005 | ಸಂಖ್ಯೆ |
|---|---|---|
| 1 | ಮಾಹಿತಿ ಕೋರಿ ಬಂದ ಅರ್ಜಿಗಳ ಸಂಖ್ಯೆ | 259 |
| 2 | ಮಾಹಿತಿ ಒದಗಿಸಿ ವಿಲೇಮಾಡಲಾದ ಅರ್ಜಿಗಳ ಸಂಖ್ಯೆ | 255 |
| 3 | ಬಾಕಿ ಇರುವ ಅರ್ಜಿಗಳ ಸಂಖ್ಯೆ | 04 |
| 4 | ಮಾಹಿತಿ ಒದಗಿಸಿ ಅರ್ಜಿದಾರರಿಂದ ಪಡೆದ ಶುಲ್ಕ (ರೂ. ಗಳಲ್ಲಿ) | ರೂ. 2748/– |
| 5 | 1ನೇ ಅಪೀಲು ಪ್ರಕರಣಗಳ (ಸಾರ್ವಜನಿಕ ಪ್ರಾಧಿಕಾರಕ್ಕೆ) ಸಂಖ್ಯೆ | 48 |
| 6 | 2ನೇ ಅಪೀಲು ಪ್ರಕರಣಗಳ (ರಾಜ್ಯ ಮಾಹಿತಿ ಆಯೋಗಕ್ಕೆ) ಸಂಖ್ಯೆ | 02 |

ನಿರ್ದೇಶಕರು,
ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ
ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ, ಬೆಂಗಳೂರು.

ಅನುಬಂಧ "ಇ"

## ಅಂಕಿ ಅಂಶಗಳು

## ಅವಧಿ 01.01.2020 ರಿಂದ 31.12.2020ರ ವರೆಗೆ

**ಬಾಯ್ಲರ್ ವಿಭಾಗ:–**

| ಕ್ರ.ಸಂ | ಬಾಯ್ಲರುಗಳು | ಸಂಖ್ಯೆ |
|---|---|---|
| 1 | ರಾಜ್ಯದಲ್ಲಿರುವ ಒಟ್ಟು ಬಾಯ್ಲರುಗಳ ಸಂಖ್ಯೆ | 5294 |
| 2 | ಪರಿವೀಕ್ಷಿಸಿದ ಬಾಯ್ಲರುಗಳ ಸಂಖ್ಯೆ | 2786 |
| 3 | ಪ್ರಮಾಣೀಕೃತ ಬಾಯ್ಲರುಗಳು | 2783 |
| 4 | ದುರಸ್ತಿ ಕೈಗೊಂಡ / ಅನುಮತಿಸಿದ ಬಾಯ್ಲರುಗಳ ಸಂಖ್ಯೆ | 42 |
| 5 | ದುರಸ್ತಿ ಪೂರ್ಣಗೊಂಡ ಬಾಯ್ಲರುಗಳ ಸಂಖ್ಯೆ | 37 |

| ಕ್ರ.ಸಂ | ಎಕಾನಾಮೈಸರ್‌ಗಳು | ಸಂಖ್ಯೆ |
|---|---|---|
| 1 | ರಾಜ್ಯದಲ್ಲಿರುವ ಒಟ್ಟು ಎಕನಾಮೈಸರ್ ಸಂಖ್ಯೆ | 114 |
| 2 | ಪರಿವೀಕ್ಷಿಸಿದ ಎಕಾನಾಮೈಸರುಗಳ ಸಂಖ್ಯೆ | 32 |
| 3 | ಪ್ರಮಾಣೀಕೃತ ಎಕಾನಾಮೈಸರುಗಳ ಸಂಖ್ಯೆ | 28 |
| 4 | ದುರಸ್ತಿ ಕೈಗೊಂಡ / ಅನುಮತಿಸಿದ ಎಕಾನಾಮೈಸರುಗಳ ಸಂಖ್ಯೆ | 02 |
| 5 | ದುರಸ್ತಿ ಪೂರ್ಣಗೊಂಡ ಎಕಾನಾಮೈಸರುಗಳ ಸಂಖ್ಯೆ | 01 |

| ಕ್ರ.ಸಂ | ಹಬೆಕೊಳವೆ | ಸಂಖ್ಯೆ |
|---|---|---|
| 1 | ರಾಜ್ಯದಲ್ಲಿರುವ ನೊಂದಾವಣೆಯಾಗಿರುವ ಒಟ್ಟು ಹಬೆಕೊಳವೆ ಸಂಖ್ಯೆ | 4410 |
| 2 | ಪರಿವೀಕ್ಷಿಸಿದ ಹಬೆಕೊಳವೆ ಸಂಖ್ಯೆ | 1901 |

| ಕ್ರ.ಸಂ | ಐಬಿಆರ್ ರಡಿಯಲ್ಲಿ ಮಾನ್ಯತೆ ಪಡೆದ ದುರಸ್ತಿದಾರರು | ಸಂಖ್ಯೆ |
|---|---|---|
| 1 | ಸ್ಪೆಷಲ್ ಕ್ಲಾಸ್ ಬಾಯ್ಲರ್ ದುರಸ್ತಿದಾರರು | 15 |
| 2 | ಕ್ಲಾಸ್–1 ಬಾಯ್ಲರ್ ದುರಸ್ತಿದಾರರು | 24 |
| 3 | ಕ್ಲಾಸ್–2 ಬಾಯ್ಲರ್ ದುರಸ್ತಿದಾರರು | 08 |
| 4 | ಕ್ಲಾಸ್–3 ಬಾಯ್ಲರ್ ದುರಸ್ತಿದಾರರು | 09 |

| ಕ್ರ.ಸಂ | ಪರೀಕ್ಷೆಗಳು | ಸಂಖ್ಯೆ |
|---|---|---|
| 1 | ಬಾಯ್ಲರ್ ಆಪರೇಷನ್ ಇಂಜಿನಿಯರ್ಸ್ ಪರೀಕ್ಷೆ ಹಾಜರಾದವರ ಸಂಖ್ಯೆ | – |
| 2 | ಉತ್ತೀರ್ಣರಾದವರ ಸಂಖ್ಯೆ | – |
| 3 | ಫಸ್ಟ ಕ್ಲಾಸ್ ಬಾಯ್ಲರ್ ಅಟೆಂಡೆಂಟ್ ಪರೀಕ್ಷೆಗೆ ಹಾಜರಾದವರ ಸಂಖ್ಯೆ | – |
| 4 | ಉತ್ತೀರ್ಣರಾದವರ ಸಂಖ್ಯೆ | – |
| 5 | ಸೆಕೆಂಡ್ ಕ್ಲಾಸ್ ಬಾಯ್ಲರ್ ಅಟೆಂಡೆಂಟ್ ಪರೀಕ್ಷೆಗೆ ಹಾಜರಾದವರ ಸಂಖ್ಯೆ | – |
| 6 | ಉತ್ತೀರ್ಣರಾದವರ ಸಂಖ್ಯೆ | – |
| 7 | ವೆಲ್ಡರ್ಸ್ ಪರೀಕ್ಷೆ ಮಾಡಿರುವ ಸಂಖ್ಯೆ | 13 |
| 8 | ವೆಲ್ಡರ್ಸ್ ಪರೀಕ್ಷೆಯಲ್ಲಿ ಉತ್ತೀರ್ಣರಾದವರ ಸಂಖ್ಯೆ | 12 |

| ಕ್ರಸಂ | ತಯಾರಿಕೆ | ಸಂಖ್ಯೆ |
|---|---|---|
| 1. | ಪ್ಯಾಕೇಜ್ ಬಾಯ್ಲರುಗಳು | 259 |
| 2. | ಸ್ಮಾಲ್ ಇಂಡಸ್ಟ್ರೀಯಲ್ ಬಾಯ್ಲರುಗಳು | 86 |
| 3. | ವಾಟರ್ ಟ್ಯೂಬ್ ಬಾಯ್ಲರುಗಳು | 179 |
| 4. | ವಾಲ್ವ್‌ಗಳು | 21701 |
| 5. | ಕ್ಯಾಸ್ಟಿಂಗ್ಸ್ | 0 |
| 6. | ಫೋರ್ಜಿಂಗಳು | 0 |
| 7. | ಥರ್ಮೋವೆಲ್‌ಗಳ | 0 |
| 8. | ಎಲೆಕ್ಟ್ರೋಡ್ಸ್ | 2 |
| 9. | ಬಾಯ್ಲರುಗಳು ಟ್ಯೂಬುಗಳು | 62 |
| 10. | ಎಸ್.ಹಚ್ ಕಾಯಿಲ್‌ಗಳು | 236 |
| 11. | ಸಿಬಿಡಿ / ಐಬಿಡಿ ಟ್ಯಾಂಕ್ | 3 |
| 12. | ಪಿ.ಆರ್.ಎಸ್ | 5 |
| 13. | ಎಕಾನಾಮೈಜರ್ ಕಾಯಿಲ್‌ಗಳು | 18 |
| 14. | ಬೆಂಡುಗಳು | 50 |
| 15. | ಬೆಡ್ ಕಾಯಿಲ್‌ಗಳು | 1168 |
| 16. | ಹೆಡರ್‌ಗಳು | 17 |
| 17. | ಪ್ರೆಶರ್ ಗೇಜುಗಳು | 0 |
| 18. | ರೆಡ್ಯೂಸರ್ / ಟಿ / ಬ್ಯಾಂಕ್ ಟ್ಯೂಬ್ಸ್ | 1320 |
| 19. | ಬೆಡ್ ಎಸ್.ಹಚ್ ಕಾಯಿಲ್‌ಗಳು | 120 |
| 20. | ಹಾಫ್ ಕಪ್ಲಿಂಗ್‌ಗಳು | 945 |
| 21. | ಸ್ಟಬ್ಸ್‌ಗಳು | 160 |
| 22. | ನಿಪ್ಪಲ್ ಫಿಟ್ಟಿಂಗ್ | 1025 |
| 23. | ಇತರೆ | 150 |

ನಿರ್ದೇಶಕರು,
ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ
ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ, ಬೆಂಗಳೂರು.